ಏಪ್ರಿಲ್ – ಜೂನ್ –2020

ಸಂಪುಟ : 2 ಸಂಚಿಕೆ : 2

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

April - June 2020

# KRUSHI VANA

*Quarterly news letter*



# ಕೋವಿಡ್–19 ಮಾನವ ಜನಾಂಗಕ್ಕೆ ಕಲಿಸಿದ ಪಾಠ

ಸಂಪಾದಕೀಯ...

ಕೋವಿಡ್–19 (ಕೊರೋನಾ ವೈರಸ್) ಸೃಷ್ಟಿಸಿದ ತಲ್ಲಣ ಮತ್ತು ರೋಗ ಹರಡುವುದನ್ನು ತಡೆಗಟ್ಟಲು ಲಾಕ್‌ಡೌನ್ ನಂತಹ ನಿರ್ಭಂಧಿತ ಕ್ರಮಗಳು ಸಾಮಾನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು. ಈ ತರಹದ ಕಡಿವಾಣ ಸಾಮಾನ್ಯವಾಗಿ ಪರಿಸರಕ್ಕೆ ಅನುಕೂಲಕರವಾಗಿದೆ. ಅಲ್ಲದೆ ಸುತ್ತಮುತ್ತಲಿನ ನೈಸರ್ಗಿಕ ವಾತಾವರಣಕ್ಕೆ ವಿಶೇಷವಾಗಿ ಸಹಾಯಕವಾಗಿದೆ. ಇದರಿಂದಾಗಿ ನಮ್ಮ ಪರಿಸರವನ್ನು ಸರಿಪಡಿಸಲು ಅನೇಕ ಗುರಿಗಳು ತನ್ನಿಂದ ತಾನೇ ಸಾಧಿಸಿದಂತಾಗಿದೆ. ಪಳೆಯುಳಿಕೆಯ ಇಂಧನ ಬಳಕೆ ಕಡಿಮೆಯಾಗಿದೆ. ರಸ್ತೆ ಸಂಚಾರ ತುಂಬಾ ಕಡಿಮೆಯಾಗಿದೆ. ಮಾಲಿನ್ಯದ ಪ್ರಮಾಣದಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಇದಲ್ಲದೆ ಇನ್ನೂ ಮುಂತಾದ ಪರಿಸರಕ್ಕೆ ಪೂರಕವಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮಾನವನಿಗೆ ಬರುತ್ತಿದ್ದ ಅನೇಕ ಸಾಮಾನ್ಯ ಕಾಯಿಲೆಗಳು ಲಾಕ್‌ಡೌನ್‌ನಿಂದಾಗಿ ಜನರು ಅನುಸರಿಸುತ್ತಿರುವ ಸರಳ ಜೀವನ ಹಾಗೂ ಆರೋಗ್ಯಕರ ಆಹಾರ ಪದ್ಧತಿಯಿಂದ ತುಂಬಾ ಕಡಿಮೆಯಾಗಿವೆ. ಈ ನಿರ್ಭಂಧದಿಂದಾಗಿ ಒಟ್ಟಿಗೆ ಜೀವಿಸುವ ಕುಟುಂಬ ಕ್ರಮ, ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು, ಆನ್‌ಲೈನ್ ಕಲಿಕೆ, ಮನೆ ತೋಟದ ಕೆಲಸ, ನೆರೆಹೊರೆಗಳ ಹಸಿರೀಕರಣಗೊಳಿಸುವ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಪ್ರಚೋದಿಸಿವೆ. ಇದರಿಂದಾಗಿ ಜನರ ಸಂತೋಷಕರ ಜೀವನವನ್ನು ಹೆಚ್ಚಿಸುವುದರೊಂದಿಗೆ, ಜನರ ಸಾಮಾನ್ಯ ಜೀವನವನ್ನು ತೃಪ್ತಿಕರವಾಗಿಸಿಡಲು ನಾಂದಿಯಾಗಿದೆ. ಲಾಕ್‌ಡೌನ್‌ನ ನಿರ್ಭಂಧದಿಂದಾಗಿ ಜೀವನವನ್ನು ಸರಳವಾಗಿ ಹಾಗೂ ಹೆಚ್ಚು ಕ್ಲಿಷ್ಟಕರವಲ್ಲದೆ ನಡೆಸಬಹುದೆಂಬ ದೊಡ್ಡ ಪಾಠವನ್ನು ಕಲಿತಂತಾಗಿದೆ.

ಮೇಲಿನ ನಿರ್ಭಂಧಗಳಿಂದಾಗಿ ಪರಿಸರಕ್ಕಾಗಿರುವ ಲಾಭಗಳು ಅಷ್ಟಿಷ್ಟಲ್ಲ ಹಾಗೂ ಕೊರೋನಾ ಕಡಿಮೆಯಾದ ನಂತರವೂ ಇಂತಹ ಲಾಭಗಳು ಪರಿಸರದ ಸ್ಥಿರತೆಗೆ ಮುಂದುವರೆಯುವಂತಾಗಬೇಕಿದೆ. ಹೇಳಬೇಕೆಂದರೆ, ನಮ್ಮ ನಿರ್ಧಾರಗಳು ಸಾಧ್ಯವಾದಷ್ಟು ಸರಳ ಜೀವನ ಶೈಲಿಯಿಂದಾಗಿ ನಮ್ಮ ಸ್ವಾಭಾವಿಕ ಪರಿಸರದ ಮೇಲಿನ ಒತ್ತಡವನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಗೊಳಿಸುವುದನ್ನು ಮುಂದುವರೆಸ ಬೇಕಿದೆ.



ನಾವು ಈ ಭೂಮಿಯ ಮೇಲೆ ಹೊಂದಿರುವ ಅತೀ ಮುಖ್ಯವಾದ ನೈಸರ್ಗಿಕ ಸಂಪನ್ಮೂಲಗಳೆಂದರೆ ಗಾಳಿ, ನೀರು, ಭೂಮಿ ಮತ್ತು ಅರಣ್ಯಗಳು. ಕುತೂಹಲಕರವಾದ ವಿಷಯವೆಂದರೆ ಈ ನಾಲ್ಕು ನೈಸರ್ಗಿಕ ಸಂಪನ್ಮೂಲಗಳು ಒಂದಕ್ಕೊಂದು ಆಂತರಿಕವಾಗಿ ಮತ್ತು ಜೈವಿಕವಾಗಿ (ಸುವ್ಯವಸ್ಥಿತವಾಗಿ) ಪರಸ್ಪರ ಸಂಬಂಧವನ್ನು ಹೊಂದಿವೆ. ಅರಣ್ಯಗಳು ಇದಕ್ಕೆ ಬಹಳ ಸೂಕ್ಷ್ಮ ಕೊಂಡಿಯಂತೆ ನಿಯಂತ್ರಕವಾಗಿ ಮತ್ತು ಅನ್ಯೋನ್ಯತೆಯೊಂದಿಗೆ ಸಮತೋಲನವನ್ನು ಕಾಪಾಡುವ ಪಾತ್ರವನ್ನು ವಹಿಸಿದೆ. ವಾಸ್ತವಾಂಶವೆಂದರೆ, ಅರಣ್ಯಗಳು ಮತ್ತು ಮರಗಳು ಇನ್ನುಳಿದ ಮೂರು ಸಂಪನ್ಮೂಲಗಳು ಅತೀ ಶಕ್ತಿಯುತವಾಗಿ ಮತ್ತು ಒಟ್ಟಾರೆಯಾಗಿ ಕಾರ್ಯ ನಿರ್ವಹಿಸುವುದನ್ನು ಖಾತ್ರಿ ಪಡಿಸಿಕೊಳ್ಳುತ್ತವೆ. ಅನೇಕ ಚಟುವಟಿಕೆಗಳಾದ ಕೃಷಿ ಅರಣ್ಯ, ತೋಟಗಾರಿಕೆ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ, ಸಾವಯವ ಕೃಷಿ, ಪಶುಪಾಲನೆ ಮತ್ತು ಸಮಗ್ರ ಬೇಸಾಯ ಕ್ರಮಗಳು ಮುಂತಾದವುಗಳು ಮನುಷ್ಯನಿಗೆ ಬುದ್ಧಿವಂತಿಕೆಯಿಂದ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕಲಿಸಲಿವೆ ಮತ್ತು ಈ ಸಂಪನ್ಮೂಲಗಳು ಕ್ಷಯಿಸಿದಂತೆ ಅಥವಾ ಹಾಳಾಗದಂತೆ ನೋಡಿಕೊಳ್ಳುವ ಪರಿಪಾಠವನ್ನು ಕಲಿಸಿದೆ.

–ಶ್ರೀ. ದೀಪಕ್ ಶರ್ಮ ಭಾ.ಅ.ಸೇ(ನಿವೃತ್ತ)
ಸಂಪಾದಕರು

# ವಿಜ್ಞಾನ ನಮ್ಮನ್ನು ಎಲ್ಲಿಂದ ಎಲ್ಲಿಗೆ ತಂದಿದೆ ನೋಡಿ.

ಮೊದಲು :– ಬಾವಿಗಳಲ್ಲಿನ ನೀರು ಕುಡಿದು ನೂರು ವರ್ಷ ಬದುಕ್ತಾ ಇದ್ರು,
ಇವಾಗ :– **RO** ಫಿಲ್ಟರ್ ನೀರು ಕುಡಿದೂ ಸಹ **40** ವರ್ಷದಲ್ಲೇ ಮುದುಕರಾಗ್ತಿದಾರೆ.
ಮೊದಲು :– ಗಾಣದ ಎಣ್ಣೆ ತಿಂದು ವೃದ್ಧಾಪ್ಯದಲ್ಲಿಯೂ ಗಟ್ಟಿಮುಟ್ಟಾಗಿರ್ತಿದ್ರು,
ಇವಾಗ :– ಡಬಲ್ ಫಿಲ್ಟರ್ ಎಣ್ಣೆ ತಿಂದೂ ಕೂಡ ಯೌವ್ವನದಲೇ ಏದುಸಿರು ಬಿಡ್ತಾರೆ.
ಮೊದಲು :– ಹರಳುಪ್ಪು ಸೇವಿಸಿಯೂ ಆರೋಗ್ಯವಂತರಾಗಿರ್ತಿದ್ರು,
ಇವಾಗ :– ಅಯೋಡಿನ್ ಉಪ್ಪು ಸೇವಿಸಿಯು ಹೈ– ಲೋ ಬಿಪಿ ಇಂದ ಬಳಲ್ತಾರೆ.
ಮೊದಲು :– ಬೇವು, ಇದ್ದಿಲು, ಉಪ್ಪಿನಿಂದ ಹಲ್ಲುಜ್ಜಿ **80** ವರ್ಷದವರೆಗೆ ಕಬ್ಬು ಜಗೀತಿದ್ರು,
ಇವಾಗ :–ಕೋಲ್ಗೇಟ್‌ನಿಂದ ಹಲ್ಲುಜ್ಜಿಯೂ ದಂತ ವೈದ್ಯರ ಹತ್ತಿರ ಹೋಗ್ತಾರೆ.
ಮೊದಲು:– ನಾಡಿ ನೋಡಿ ರೋಗ ಯಾವುದೆಂದು ಹೇಳ್ತಾ ಇದ್ರು,
ಇವಾಗ:– ತಪಾಸಣೆ ಮಾಡಿಯೂ ರೋಗ ಯಾವುದೆಂದು ಹೇಳೋಕಾಗ್ತಿಲ್ಲ.
ಮೊದಲು :– **7–8** ಮಕ್ಕಳಿಗೆ ಜನ್ಮ ನೀಡಿದ ತಾಯಿ **80** ವರ್ಷದಲ್ಲಿಯೂ ಹೊಲದಲ್ಲಿ ದುಡಿಯುತ್ತಿದ್ದಳು,
ಇವಾಗ :– ಮೊದಲ ತಿಂಗಳೇ ವೈದ್ಯರ ಸಲಹೆಯಲ್ಲಿ, ಆದರೂ ಕೂಡ ಮಕ್ಕಳು ಹೊಟ್ಟೆ ಹರಿದು ಹುಟ್ತಿದ್ದಾರೆ.
ಮೊದಲು:– ಬೆಲ್ಲದ ಸಿಹಿ ತಿಂಡಿಗಳನ್ನು ಹೊಟ್ಟೆ ತುಂಬಾ ತಿಂತಾ ಇದ್ರು,
ಇವಾಗ :– ತಿನ್ನೋಕ್ ಮೊದ್ಲೇ ಶುಗರ್ ಬಂದ್ಬಿಟ್ಟಿರುತ್ತೆ.
ಮೊದಲು :– ವೃದ್ಧರ ಮಂಡಿ ಕೂಡ ನೋಯ್ತಿರಲಿಲ್ಲ,
ಇವಾಗ :– ಯೌವ್ವನಾವಸ್ಥೆಯಲ್ಲೇ ಮಂಡಿ, ಸೊಂಟ ನೋವಿನಿಂದ ಬಳಲ್ತಿದ್ದಾರೆ.
ಕೊನೆಗೆ
ಇದು ವಿಜ್ಞಾನದ ಯುಗವೋ, ಅಜ್ಞಾನದ ಯುಗವೋ ಒಂದೂ ತಿಳಿತಿಲ್ಲ. ವಿಪರ್ಯಾಸ!!!!

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume : 2 Issue : 2

ಸಂಪುಟ : 2 ಸಂಚಿಕೆ : 2



## ಸಂಪಾದಕ ಮಂಡಳಿ

### ಗೌರವ ಸಂಪಾದಕರು

ಶ್ರೀ ಎನ್.ಸಂಪಗಿ, ಭಾ.ಅ.ಸೇ(ನಿ)

### ಸಂಪಾದಕರು

ಶ್ರೀ ದೀಪಕ್ ಶರ್ಮಾ, ಭಾ.ಅ.ಸೇ(ನಿ)

### ಸಹ ಸಂಪಾದಕರು

ಶ್ರೀ.ಹೆಚ್.ಜಿ.ಶಿವಾನಂದಮೂರ್ತಿ, ಭಾ.ಅ.ಸೇ(ನಿ),

### ಸದಸ್ಯರು

ಶ್ರೀ ಎ.ಎಂ.ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್.ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ.ಎಚ್.ಜಿ



### ಕಛೇರಿ ವಿಳಾಸ:

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com

www.iaft.co.in



**Publisher : IAFT**

**Editor- Dipak Sharma, IFS(R)**

**KRUSHI VANA**

**Quarterly *News* letter**

**April - June 2020**

**Printed by :**

**S.K.CHANDRASHEKAR, Rathna Offset Printers, #.120, 1st Main Road, Cavery Nadhi Road, Bridavana Nagar, Bangalore-560019**


## ನುಡಿಗಟ್ಟು

ನಮ್ಮ ಬಾಲ್ಯದಲ್ಲಿ ನಮಗೆ ನೀಡಿದ ವಾತ್ಸಲ್ಯವನ್ನು ತಮ್ಮ ವೃಧ್ಧಾಪ್ಯದಲ್ಲಿ ಹಿಂತಿರುಗಿ ಬಯಸುವುದಕ್ಕಿಂತ ಮತ್ತೇನೂ ಹೆಚ್ಚಿನದನ್ನು ಯಾವ ತಂದೆ–ತಾಯಿಗಳೂ ತಮ್ಮ ಮಕ್ಕಳಿಂದ ಬಯಸಲಾರರು!

## ಜಾಹೀರಾತು ವಿವರಗಳು

ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ಈ ಕೆಳಗಿನ ದರಗಳನ್ನು ನಿಗದಿ ಮಾಡಿದೆ

| ಕ್ರ.ಸಂ | ವಿಸ್ತೀರ್ಣ | ಕಪ್ಪು ಬಿಳುಪು ದರ. ರೂ.ಗಳಲ್ಲಿ | ವರ್ಣಮಯ ದರ. ರೂ.ಗಳಲ್ಲಿ | ಅವಧಿ |
|---|---|---|---|---|
| 1 | 1/4 ಪುಟ | 2500/– | 5000/– | 1 ವರ್ಷ |
| 2. | 1/2 ಪುಟ | 5000/– | 10000/– | 1 ವರ್ಷ |
| 3. | 1 ಪುಟ | 10000/– | 20000/– | 1 ವರ್ಷ |

## ಮನವಿ

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಕೃಷಿ ಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಹಾಗೂ ನಿವೃತ್ತ ಅಧಿಕಾರಿಗಳು, ಪ್ರಗತಿಪರ ರೈತರು ಹಾಗೂ ಕೃಷಿ ವಿಶ್ವ ವಿದ್ಯಾನಿಲಯದ ಹಾಲಿ ಹಾಗೂ ನಿವೃತ್ತ ಉಪ ಕುಲಪತಿಗಳು, ಪ್ರಾಧ್ಯಾಪಕರು, ರೈತರು ಸದಸ್ಯರಾಗಿರುತ್ತಾರೆ. ಈ ಹಿರಿಯ ಹಾಗೂ ಅನುಭವಿ ತಜ್ಞರಿಂದ ಸರ್ಕಾರ, ಅರಣ್ಯ ಇಲಾಖೆ ಹಾಗೂ ರೈತರ ನಡುವೆ ಕೃಷಿ ಅರಣ್ಯ ಬೆಳೆಸುವಲ್ಲಿ ಸಲಹೆ ಸಹಕಾರ ನೀಡಲಾಗುತ್ತಿದೆ ಈ ಸಂಸ್ಥೆಗೆ ಸದಸ್ಯರಾಗ ಬಯಸುವವರು ಈ ಸಂಚಿಕೆಯ ಹಿಂದಿನ ಒಳಪುಟದಲ್ಲಿರುವ ಅರ್ಜಿ ನಮೂನೆಯ ಪ್ರತಿಯಲ್ಲಿ ಮಾಹಿತಿ ನೀಡಿ ಸದಸ್ಯತ್ವ ಶುಲ್ಕವನ್ನು IAFT ಗೆ ಪಾವತಿ ಮಾಡಿ ಈ ಕೆಳಗಿನ ಅಕೌಂಟ್‌ಗೆ ಚೆಕ್/ಡಿಡಿ/ NEFT ಮಾಡಲು ಕೋರಿದೆ. ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

**Syndicate Bank (ಈಗ Canara Bank), 18th Cross, Malleshwaram, Bengaluru.**

**Account Holder Name : IAFT**

**SB Account No: 04242010115100**

**IFSC: SYNB0000424**


ಶ್ರೀ ಎ.ಎಂ. ಅಣ್ಣಯ್ಯ

ಕಾರ್ಯದರ್ಶಿ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ

ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ,

ಮಲ್ಲೇಶ್ವರಂ, ಬೆಂಗಳೂರು

ದೂ: 9448019306

ಮೇಲ್: am.annaiah@gmail.com

# ಭಾರತದಲ್ಲಿ ಮಿಡತೆಗಳ ವಲಸೆ ಹಾಗೂ ದಾಳಿಯ ಒಂದು ಅವಲೋಕನ


ಡಾ. ಡಿ. ರಾಜಗೋಪಾಲ್, ಹಿರಿಯ ಕೀಟ ಶಾಸ್ತ್ರಜ್ಞರು, ನಿವೃತ್ತ ಡೀನ್ (ಸ್ನಾತಕೋತ್ತರ),
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮೊ: 9448055514

ನಮ್ಮ ದೇಶ ಇಂದು ಮೂರು ಪ್ರಧಾನ ಸಮಸ್ಯೆಗಳನ್ನು ಎದುರಿಸುತ್ತಿದೆ. ಮೊದಲನೆಯದು ಇಡೀ ವಿಶ್ವವನ್ನೇ ವ್ಯಾಪಿಸಿರುವ ಮಹಾಮಾರಿ ಕೊರೋನ ವೈರಸ್. ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿ ವಿಸ್ತಾರಗೊಂಡು ನಾಗರೀಕರ ಮೇಲೆ ತೀವ್ರ ಪರಿಣಾಮ ಬೀರಿರುತ್ತದೆ. ಇಡೀ ದೇಶವೇ ಶೋಕ ಸಾಗರದಲ್ಲಿ ಮುಳುಗುತ್ತಿರುವಾಗ ಎಲ್ಲಾ ನಾಗರೀಕರು ಭಯದಿಂದ ತತ್ತರಿಸುತ್ತಿರುವಾಗ ಉತ್ತರ ಮತ್ತು ದಕ್ಷಿಣ ಭಾರತ ರಾಜ್ಯಗಳಲ್ಲಿ ಕೃಷಿ ಬೆಳೆಗಳು, ಪ್ಲಾಂಟೇಶನ್‌ಗಳು ಹಾಗೂ ಅರಣ್ಯದ ಗಿಡ ಮರಗಳನ್ನು ಹೊರದೇಶದಿಂದ ಬಂದಿರುವ ಮಿಡತೆ ದಂಡಿನ ದಾಳಿಯಿಂದ ಬೆಳೆಗಳನ್ನು ತಿಂದು ನಾಶಪಡಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರದಿಂದ ಗಂಟೆಗೆ 100 ಕಿ.ಮಿ. ವೇಗದಲ್ಲಿ ಭಾರಿ ಮಳೆ ಬಿರುಗಾಳಿಯೊಂದಿಗೆ ಅಪ್ಪಳಿಸುತ್ತಿರುವ ನಿಸರ್ಗ ಚಂಡಮಾರುತದ ಆರ್ಭಟದಿಂದ ದೇಶದ ಜನರು ತಲ್ಲಣಿಸಿರುತ್ತಾರೆ.

ಈ ಮೂರು ಸಮಸ್ಯೆಗಳಲ್ಲಿ ದೇಶದಲ್ಲಿ ಮಿಡತೆ ದಾಳಿಯ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಸಲುವಾಗಿ ಈ ಪ್ರಬಂಧ ಮಂಡಿಸುತ್ತಿದ್ದೇನೆ. ಮೊದಲಿಗೆ, ಮಿಡತೆಗಳೆಂದರೇನು? ಎಂಬುದು ತಿಳಿಯುವುದಾದರೆ, ಮಿಡತೆಗಳು ಪ್ರಾಣಿ ಸಂಕುಲದ 'ಸಂದಿಪದಿ' ಉಪಕೋಟಿಯ **'ಆರ್ಥೋಪ್ಟೆರಾ'** ಗಣದ **'ಎಕ್ರಿಡಿಡೆ'** ಮತ್ತು **'ಟೆಟ್ಟಿಗೋನಿಡೆ'**ಕುಟುಂಬಗಳಿಗೆ ಸೇರಿವೆ. ಮಿಡತೆಗಳನ್ನು ಆಂಗ್ಲಭಾಷೆಯಲ್ಲಿ ಗ್ರಾಸ್‌ಹಾಪರ್ಸ್ ಅಥವಾ ಲೋಕಸ್ಟ್‌ಗಳೆಂದು ಕನ್ನಡ ಭಾಷೆಯಲ್ಲಿ 'ಮಿಡತೆ'ಗಳೆಂದು ಕರೆಯುವ ವಾಡಿಕೆ. ಮಿಡತೆಗಳು ಗುಂಪಾಗಿ ದಂಡುಗಳಂತೆ ವಲಸೆ ಹೋಗುವುದರಿಂದ ಇವುಗಳನ್ನು **'ಲೋಕಸ್ಟ್'**ಗಳೆಂದು ಕರೆಯುವುದು ಪ್ರಚಾರದಲ್ಲಿದೆ. ಎರಡು ಮಿಡತೆ ಕುಟುಂಬಗಳ 'ಎಕ್ರಿಡಿಡೆ' ಮಿಡತೆಗಳಲ್ಲಿ ಮೋಟು ಕುಡಿಮೀಸೆಗಳಿದ್ದು **'ಟೆಟ್ಟಿಗೋನಿಡೆ'** ಕುಟುಂಬದಲ್ಲಿ ಉದ್ದವಾದ ಕುಡಿಮೀಸೆಗಳಿರುತ್ತವೆ. ವಲಸೆ ಹೋಗಿ ಬೆಳೆಯನ್ನು ನಾಶ ಮಾಡುವ ಹಾಗೂ ವಿಶ್ವದಲ್ಲಿ ಹೆಚ್ಚಿನ ಪೀಡೆಗಳೆಂದು ಪ್ರಚಾರದಲ್ಲಿರುವ ಕೀಟಗಳೇ ಮೋಟಾದ ಮೀಸೆಗಳಿರುವ ಲೋಕಸ್ಟ್‌ಗಳು 'ಎಕ್ರಿಡಿಡೆ' ಕುಟುಂಬಕ್ಕೆ ಸೇರಿವೆ.

ಮಿಡತೆಗಳು ಮಧ್ಯಮ ಗಾತ್ರದ ಕೀಟ ಪೀಡೆಗಳು ದೇಹವನ್ನು ತಲೆ, ಎದೆ ಮತ್ತು ಹೊಟ್ಟೆಗಳೆಂದು ಮೂರು ಭಾಗವಾಗಿ ವಿಂಗಡಿಸಿದೆ. ಸಂಯುಕ್ತ ಕಣ್ಣುಗಳು ಕುಡಿಮೀಸೆ ಬಾಯಿಭಾಗಗಳು ತಲೆಯಲ್ಲಿರುತ್ತವೆ. ಕಾಲುಗಳು ಮತ್ತು ರೆಕ್ಕೆಗಳು ಎದೆಯ ಭಾಗದಲ್ಲಿರುತ್ತವೆ. ನೆಗೆಯಲು ಮತ್ತು ಹಾರಲು ಅತ್ಯಂತ ಶಕ್ತಿಯುತವಾದ ಕಾಲುಗಳು ಶರೀರದ ಎದೆಯ ಭಾಗದಲ್ಲಿ ಅಳವಡಿಸಿಕೊಂಡಿವೆ. ಕಾಲುಗಳು ಹಿಂಭಾಗಕ್ಕೆ ಮಡಿಸಲು ಹಾಗೂ ಮಿಡತೆಗಳು ತಮ್ಮ ಗಣದ ಹೆಸರಿಗೆ ತಕ್ಕಂತೆ ನೇರವಾದ ಮತ್ತು ಸಮತಲವಾದ ಗಡಸು ರೆಕ್ಕೆಗಳಿರುತ್ತವೆ. ಮುಂದಿನ ರೆಕ್ಕೆಗಳು ಗಟ್ಟಿಯಾಗಿ ಚರ್ಮದಂತೆ ಹಿಂದಿನ ರೆಕ್ಕೆಗಳು ಪೊರೆಯಂತಿದ್ದು ಬೀಸಣಿಗೆಯಂತೆ ಮಡಚಿಕೊಂಡಿರುತ್ತವೆ. ಹಾರುವಾಗ ಇವುಗಳ ಪಾತ್ರ ಮುಖ್ಯವಾದುದು. ಮಿಡತೆಗಳ ತಲೆಯ ಮುಂದೆ ಬಾಯಿ ಭಾಗ

**ಚಿತ್ರ 1**




ಬಾಚಿಹಲ್ಲು ಮತ್ತು ಗಟ್ಟಿಯಾದ ದವಡೆ ಹಲ್ಲುಗಳಿಂದ ಕೂಡಿದ್ದು ಸಸ್ಯಗಳನ್ನು ಸುಲಭವಾಗಿ ಕಚ್ಚಿ ತಿನ್ನುವಂತೆ ಮಾರ್ಪಾಡಾಗಿರುತ್ತವೆ. ಈ ಬಾಯಿಯ ಮಾರ್ಪಾಡನ್ನು ಕೀಟಗಳು ಕಚ್ಚಿ ಅಗೆದು ತಿನ್ನುವ ಬಾಯಿ ಮಾರ್ಪಾಡೆಂದು ಕರೆಯುತ್ತಾರೆ.

ಮಿಡತೆಗಳ ಗುಂಪನ್ನು ಅವುಗಳ ಜೈವಿಕ ಹಂತದ ಆಧಾರದ ಮೇಲೆ ಎರಡು ಬಗೆಯ ಹಂತಗಳನ್ನು ಕಾಣಬಹುದು. 1. ಗ್ರಿಗೇರಿಯಸ್ ಫೇಸ್ ಮತ್ತು 2. ಸಾಲಿಟರಿ ಫೇಸ್. ಗ್ರಿಗೇರಿಯಸ್‌ಫೇಸ್ ಎಂದರೆ ಮಿಡತೆ ಪ್ರಭೇದಗಳು ಗುಂಪಾಗಿ ಜೀವಿಸುವ ಸ್ಥಿತಿಯಲ್ಲಿ ತಮ್ಮ ಸಹಜ ಪ್ರವೃತ್ತಿಯಿಂದ ಹಿಂಡು ಹಿಂಡಾಗಿ ಹಾರಿ ಚಲಿಸುವ ಮಿಡತೆ ಪ್ರಭೇದಗಳು. ಇವುಗಳೇ ವಿಶ್ವಖ್ಯಾತಿ **'ಲೋಕಸ್ಟ್'**ಗಳು. ಅವುಗಳಿಗೆ ಸಿಕ್ಕುವ ಎಲ್ಲಾ ಸಸ್ಯಗಳನ್ನು ತಿನ್ನುತ್ತವೆ. ಅವುಗಳನ್ನು 'ಸರ್ವಭಕ್ಷಕ' ಕೀಟಗಳೆಂದು ಕರೆಯಬಹುದು. ಸಾಲಿಟರಿ ಫೇಸ್ ಎಂದರೆ ಮಿಡತೆ ಪ್ರಭೇದಗಳು ಒಂಟಿಯಾಗಿ ಜೀವಿಸುವ ಸ್ಥಿತಿಯಲ್ಲಿ ಹಾಗೂ ಸ್ಥಳಿಯ ಆಶ್ರಯ ಸಸ್ಯಗಳನ್ನು ಮಾತ್ರ ಅವಲಂಬಿಸಿರುತ್ತವೆ. ಗುಂಪಾಗಿ ವಲಸೆ ಹೋಗುವುದಿಲ್ಲ. ಇವುಗಳನ್ನು ಸಹ ಮಿಡತೆಗಳೆಂದೇ ಕರೆಯಬಹುದು.

## ಗ್ರಿಗೇರಿಯಸ್ ಫೇಸ್ ಗುಂಪಾಗಿ ಜೀವಿಸುವ ಹಂತ

ಈ ಗುಂಪಿಗೆ ಸೇರಿರುವ ಮಿಡತೆ ಪ್ರಭೇದಗಳು ಸಿಕ್ಕಿದ ಗಿಡ, ಮರ ಹಾಗೂ ಆಹಾರ ಬೆಳೆಗಳನ್ನು ತಿಂದು ಸರ್ವ ಭಕ್ಷಕ ಕೀಟಗಳಾಗಿವೆ. ಇವುಗಳನ್ನೇ ನಾವು 'ಲೋಕಸ್ಟ್'ಗಳೆಂದು ಅಥವಾ 'ಮಿಡತೆ' ದಂಡು ಎಂದು ಕರೆಯಬಹುದು.

**ಇವುಗಳಲ್ಲಿ ಮುಖ್ಯವಾಗಿ 3 ಪ್ರಭೇದಗಳನ್ನು ಕಾಣಬಹುದು.**

1. **ಮೈಗ್ರೇಟರಿ ಲೋಕಸ್ಟ್** – ಲೋಕಸ್ಟ ಮೈಗ್ರೇಟೋರಿಯ
2. **ಗ್ರಿಗೇರಿಯ ಲೋಕಸ್ಟ್** – ಸಿಸ್ಟೋಸೆರ್ಕ ಗ್ರಿಗೇರಿಯಾ
3. **ಬಾಂಬೆ ಲೋಕಸ್ಟ್** – ಪತಂಗ ಸಕ್ಸಿಂಕ್ಟ

ಈ ಮೂರು ಪ್ರಭೇದಗಳ ಮಿಡತೆಗಳು ಒಂದು ಜಾಗದಿಂದ

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

ಮತ್ತೊಂದು ಜಾಗಕ್ಕೆ ಗುಂಪಾಗಿ ಹಾರಿ ಹೋಗುವ ಪ್ರವೃತ್ತಿಯನ್ನು ಬೆಳೆಸಿಕೊಂಡಿವೆ. ಇವುಗಳಲ್ಲಿ ಅತ್ಯಂತ ಪ್ರಧಾನವಾಗಿರುವ ಮಿಡತೆಯೆಂದರೆ ಸಿಸ್ಟೋಸೆರ್ಕ ಗ್ರಿಗೇರಿಯಾ. ಈ ಪ್ರಭೇದದ ಮಿಡತೆಗಳೇ ಭಾರತದಲ್ಲಿ ವಲಸೆ ಬಂದು ದಾಳಿಗೆ ಕಾರಣವಾಗಿವೆ.

## ಜೀವನ ಚರಿತ್ರೆ :


ಪ್ರೌಢ ಕೀಟಗಳಾಗಿ ಹಂತ ತಲುಪಿದ ನಂತರ ಗಂಡು ಮತ್ತು ಹೆಣ್ಣು ಮಿಡತೆಗಳು ಬೆರೆತು ಸಂಭೋಗವಾದ ನಂತರ ಮೊಟ್ಟೆಗಳು ಕೋಶದಲ್ಲಿ ಅಭಿವೃದ್ಧಿ ಹೊಂದಿ ಕೋಶವನ್ನು (ಹೂತಿಕೆ) ಹೆಣ್ಣು ಮಿಡತೆಯ ಚೂಪಾದ ಗಟ್ಟಿಯಾದ ಅಂಡನಾಳದ ತುದಿಯಿಂದ ಮಣ್ಣಿನೊಳಗೆ ತೂರಿಸಿ ಇಡುತ್ತವೆ. ಪ್ರತಿ ಮೊಟ್ಟೆಗಳ ಕೋಶದಲ್ಲಿ 30 ರಿಂದ 34 ಮೊಟ್ಟೆಗಳಿರುತ್ತವೆ. ನಂತರ ಎರಡು ವಾರಗಳಲ್ಲಿ ಮೊಟ್ಟೆಯೊಡೆದು ಅಪ್ಸರೆ ಮರಿ ಮಿಡತೆಗಳಾಗಿ ಹೊರ ಬಂದ ನಂತರ ಸಸ್ಯಗಳನ್ನು ತಿನ್ನಲು ಪ್ರಾರಂಭಿಸುತ್ತವೆ. ಸುಮಾರು 6 ವಾರಗಳಲ್ಲಿ 5 ಸಾರಿ ಮೈಪೊರೆಯನ್ನು ಕಳಚಿ ಪ್ರೌಢ ಕೀಟಗಳಾಗುತ್ತವೆ. ಪ್ರೌಢ ಮಿಡತೆಗಳಲ್ಲಿ ರೆಕ್ಕೆಗಳು ಪೂರ್ಣ ಬೆಳೆದಿರುವುದರಿಂದ ಹಾರಾಡಲು ಪ್ರಾರಂಭಿಸುತ್ತವೆ. ಅಪ್ಸರೆ ಮಿಡತೆಗಳಲ್ಲಿಯ ಹಂತದಲ್ಲಿಯೇ, ಒಂದು ಸಸ್ಯದಿಂದ ಮತ್ತೊಂದು ಸಸ್ಯಕ್ಕೆ ನೆಗೆಯಲು ಕಾಲುಗಳು ಮೊದಲೆ ಬೆಳೆದಿರುತ್ತವೆ. ಇವುಗಳಲ್ಲಿ ಮಿಡತೆಗಳಿಗೆ ಆಹಾರ ಸಾಕಾಗುವಷ್ಟು ಸಿಗುವುದಿಲ್ಲವೆಂದು ಗೊತ್ತಾದರೆ ಮತ್ತು ವಾತಾವರಣದಲ್ಲಿ ಬದಲಾವಣೆ ಬೇಕಾದರೆ ತಮ್ಮ ಸಹಜ ಪ್ರವೃತ್ತಿಯಿಂದ ದೂರ ದೇಶಗಳಿಗೆ ವಲಸೆ ಹೋಗುತ್ತವೆ. ಮಿಡತೆಗಳು ಆಹಾರವನ್ನು ಹಗಲಿನಲ್ಲಿ ಮಾತ್ರ ತಿನ್ನುತ್ತವೆ. ಪ್ರತಿ ಮಿಡತೆಗಳು ದಿನಕ್ಕೆ 5 ರಿಂದ 6 ಗ್ರಾಂ ನಷ್ಟು ಆಹಾರವನ್ನು ಸೇವಿಸುತ್ತವೆ. ಪೂರ್ಣ ಬೆಳೆದ ಮಿಡತೆಗಳು ಸುಮಾರು 8 ರಿಂದ 9 ಗ್ರಾಂ ತೂಕವಿರುತ್ತವೆ. **(ಚಿತ್ರ 1)**

## ಪ್ರೌಢ ಮಿಡತೆ :

ಲೋಕಸ್ಟ್, ಸಿಸ್ಟೋಸೆರ್ಕ ಗ್ರಿಗೇರಿಯಾ ಪ್ರಭೇದದ ಮಿಡತೆ ದಂಡು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ವಲಸೆ ಹೋಗುವುದು ಅವುಗಳ ಜೀವನದ ಸಹಜ ಪ್ರವೃತ್ತಿ. ಆಫ್ರಿಕಾದಿಂದ ವಲಸೆಯನ್ನು ಪ್ರಾರಂಭಿಸಿ, ಇರಾನ್ ದೇಶವನ್ನು ತಲುಪಿ, ಅಲ್ಲಿ ಬೆಳೆಗಳಲ್ಲಿ ದಾಳಿ ನಡೆಸಿ ನಂತರ ಪಾಕಿಸ್ತಾನ ಅಥವಾ ಅಫಘಾನಿಸ್ತಾನ ದೇಶಕ್ಕೆ ವಲಸೆ ಹೋಗುತ್ತವೆ. ಪಾಕಿಸ್ತಾನದಲ್ಲಿ ಮಿಡತೆ ದಂಡು ಲಕ್ಷಗಟ್ಟಲೆ ಬರುವುದರಿಂದ, ಸಾವಿರಾರು ಹೆಕ್ಟೇರು ಪ್ರದೇಶಗಳಲ್ಲಿ ಹತ್ತಿ ಬೆಳೆಯನ್ನು ಭಕ್ಷಿಸಿರುವ ವರದಿಗಳಿವೆ. ಉದಾಹರಣೆಗೆ ಪಾಕಿಸ್ತಾನದಲ್ಲಿ 2,46,000 ಹೆಕ್ಟೇರು ಹತ್ತಿ ಬೆಳೆಯಲ್ಲಿ ಹಾನಿ ಮಾಡಿರುತ್ತದೆ. ಮಿಡತೆಗಳ ದಂಡು ಒಂದು ದಿವಸಕ್ಕೆ 150 ಕಿ.ಮೀ ಹಾರುತ್ತವೆ. ಪಾಕಿಸ್ತಾನದಿಂದ ರಾಜಸ್ಥಾನಕ್ಕೆ 2500 ಕಿ.ಮೀ ಇರುವುದರಿಂದ ಎರಡು ದಿನಗಳಲ್ಲಿ ಭಾರತಕ್ಕೆ ಹಾರಿ ಬಂದಿರುತ್ತವೆಂದು ಅಂದಾಜು ಮಾಡಲಾಗಿದೆ. ಒಂದು ಚದರ ಕಿ.ಮಿ. ಮಿಡತೆಗಳ ಹಿಂಡಿನಲ್ಲಿ ನಾಲ್ಕು ಕೋಟಿ ಮಿಡತೆಗಳಿರುತ್ತವೆಂದು ಅಂದಾಜು ಮಾಡಿರುತ್ತಾರೆ.

ಪಾಕಿಸ್ತಾನ ಅಥವಾ ಅಫಘಾನಿಸ್ತಾನದಿಂದ ಮಿಡತೆಗಳು ವಲಸೆ ಬರುವುದು ಇತ್ತೀಚೆಗೆ ಸಾಮಾನ್ಯ. ಭಾರತದಲ್ಲಿ ಮಿಡತೆಗಳು ದಾಳಿ ಮಾಡಿರುವ ರಾಜ್ಯಗಳೆಂದರೆ: ರಾಜಾಸ್ಥಾನ, ಮಧ್ಯಪ್ರದೇಶ, ಮಹರಾಷ್ಟ್ರ ರಾಜ್ಯಗಳಲ್ಲಿ ಹಾವಳಿಯಾಗಿರುತ್ತದೆಂದು ವರದಿಯಾಗಿದೆ. ಕರ್ನಾಟಕ ರಾಜ್ಯಕ್ಕೆ ಬರುತ್ತದೆಂದು ರೈತರಲ್ಲಿ ಆತಂಕ ಮೂಡಿಸಿತ್ತು. ಆದರೆ, ಇತ್ತೀಚಿನ ವರದಿಯ ಪ್ರಕಾರ ಛತ್ತಿಸ್‌ಘಡ

**ಚಿತ್ರ 2**




ರಾಜ್ಯದ ಅರಣ್ಯ ಪ್ರದೇಶಕ್ಕೆ ಮಿಡತೆ ದಂಡು ನುಗ್ಗಿರುವುದು ಕಂಡುಬಂದಿದೆ. ಅಲ್ಲಿನ ಸರ್ಕಾರ ತಕ್ಷಣವೆ ಕಾರ್ಯ ಪ್ರವೃತ್ತರಾಗಿ ಸೂಕ್ತ ನಿಯಂತ್ರಣ ಕಾರ್ಯಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಉಷ್ಣಾಂಶ ಹೆಚ್ಚಿದಂತೆ ಮಿಡತೆಗಳ ಸಂತಾನೋತ್ಪತ್ತಿ ಸಹ ಹೆಚ್ಚಾಗುತ್ತದೆ. ಅಂತೆಯೇ, ಬಿಸಿಲಿನ ತಾಪಮಾನದಲ್ಲಿ ಹೆಚ್ಚು ಆಹಾರವನ್ನು ಸೇವಿಸುತ್ತವೆ. ಭಾರತದಲ್ಲಿ 2011ರ ಬಳಿಕ ದೊಡ್ಡ ದಾಳಿಯಾಗಿಲ್ಲ. ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ ದಾಳಿ ನಡೆದಿತ್ತು. ಇದೇ ರೀತಿ ಆಫ್ರಿಕಾದಲ್ಲಿಯೂ ಸಹ ದಾಳಿ ನಡೆದು ಅನೇಕ ದೇಶಗಳಲ್ಲಿ ಕಿನ್ಯಾ, ಉಗಾಂಡ, ಇಥಿಯೊಪಿಯಾ, ಮುಂತಾದ ದೇಶಗಳಲ್ಲಿ ಬೆಳೆದು ನಿಂತಿರುವ ಪೂರ್ತಿ ಬೆಳೆ ಮಿಡತೆಗಳ ಪಾಲಾಗಿದೆ.

ಇಲ್ಲಿಯವರೆಗೆ, ಮಿಡತೆ ದಂಡಿನ ಹಾವಳಿ ಕರ್ನಾಟಕದಲ್ಲಿ ಕಂಡಿಲ್ಲ. ಆದುದರಿಂದ, ರೈತರು ಆತಂಕ ಪಡಬೇಕಾಗಿಲ್ಲ. ಉತ್ತರ ಭಾರತದಿಂದ **"ಮಿಡತೆಗಳು ರಾಜ್ಯಕ್ಕೆ ಬರಲಾರವು, ಆತಂಕ ಬೇಡ"** ಎಂದು ನಮ್ಮ ರಾಜ್ಯದ ಕೃಷಿಸಚಿವರು ಸಂದೇಶ ರವಾನಿಸಿರುವುದು ಸೂಕ್ತ. ಏಕೆಂದರೆ, ಹಿಂದೆ ನಮ್ಮ ರಾಜ್ಯದಲ್ಲಿ ಎಂದು **'ಲೋಕಸ್ಟ್'** ಬಾಧೆ ಕಂಡಿಲ್ಲ. ಮಹಾರಾಷ್ಟ್ರದಲ್ಲಿ ಕಂಡಿರುವುದರಿಂದ ಕರ್ನಾಟಕಕ್ಕೆ ಲಗ್ಗೆ ಇಡುತ್ತದೆಂಬ ಊಹಾ–ಪೋಹಗಳಿಂದ ರೈತರು ಹೆದರಬೇಕಾಗಿಲ್ಲ.

ವಲಸೆ ಬಂದಿರುವ ಮಿಡತೆಗಳು ಭಾರತಕ್ಕೆ ಅಪಾಯಕಾರಿ, ಯಾವ ಕ್ಷಣದಲ್ಲಿ ಬೇಕಾದರೂ ದಾಳಿ ಮಾಡಬಹುದು. ಆಗಿಂದಾಗ್ಗೆ ಮಳೆ ಬೀಳುತ್ತಿರುವುದರಿಂದ ಇವುಗಳ ಸಂಖ್ಯೆ ಹೆಚ್ಚಾಗುತ್ತವೆ. ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರದಿಂದ ಚಂಡಮಾರುತದಿಂದ ಮಿಡತೆ ದಂಡು ಕರ್ನಾಟಕಕ್ಕೆ ಬರಬಹುದು ಎಂಬ ಊಹಾ ಪೋಹಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿಲ್ಲ. ಬಿರುಗಾಳಿ, ಮಳೆ ಹಾಗೂ ಚಂಡಮಾರುತಕ್ಕೆ ಮಿಡತೆಗಳು ಸಿಕ್ಕಿ ಹಾಕಿಕೊಳ್ಳುವುದರಿಂದ ಅವುಗಳು ಬದುಕಲು ಅಸಾಧ್ಯ.

**ಸಾಲಿಟರಿ ಫೇಸ್:** ಮಿಡತೆ ಪ್ರಭೇದಗಳು ಒಂಟಿಯಾಗಿ ಜೀವಿಸುತ್ತವೆ. ಇವುಗಳು ಎಲ್ಲಿ ಹುಟ್ಟುತ್ತವೋ ಅಲ್ಲಿಯೇ ಬೆಳೆಯುತ್ತವೆ. ಯಾವುದೇ ಕಾರಣಕ್ಕೆ ಅವುಗಳನ್ನು ಲೋಕಸ್ಟ್‌ಗಳೆಂದು ಕರೆಯುವಂತಿಲ್ಲ. ಗುಂಪುಗಳಾಗಿ ವಲಸೆ ಹೋಗುವುದಿಲ್ಲ. ಉದಾಹರಣೆಗೆ, ಭಾರತದಲ್ಲಿ ಲೋಕಸ್ಟ್ ದಾಳಿ ಪ್ರಾರಂಭವಾದ

– 9 ನೇ ಪುಟಕ್ಕೆ...

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯಿಂದ ನಡೆದ ಕಾರ್ಯಕ್ರಮಗಳ ಬಗ್ಗೆ (ಏಪ್ರಿಲ್ 2020 ರಿಂದ ಜೂನ್ 2020)ರ ವರದಿ

✍ ಎ.ಎಂ. ಅಣ್ಣಯ್ಯ, ಕಾರ್ಯದರ್ಶಿ
ಕೃಷಿ-ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ದೂ: 9448019306

1. ದಿ:15-05-2020 ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯು ಹೊಸದಾಗಿ ನೇಮಕವಾಗಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) **ಶ್ರೀ ಸಂಜಯ್ ಮೋಹನ್**, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ) **ಶ್ರೀ ರಾಜ್ ಕಿಶೋರ್‌ಸಿಂಗ್** ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಜೀವ ವೈವಿಧ್ಯತೆ ಮಂಡಳಿ) **ಶ್ರೀ ವೀರೇಂದ್ರ ಸಿಂಗ್** ಅವರುಗಳನ್ನು ಅಭಿನಂದಿಸಲಾಯಿತು. ಕರ್ನಾಟಕ ಅರಣ್ಯ ಇಲಾಖೆ ವತಿಯಿಂದ 2020-21ನೇ ಸಾಲಿಗೆ **ಈಶಾ ಫೌಂಡೇಶನ್** (ಕಾವೇರಿ ಕೂಗು) ಕಾವೇರಿ ಜಲಾನಯನ ಹಾಗೂ ಅಚ್ಚುಕಟ್ಟು ಪ್ರದೇಶದಲ್ಲಿ ನೆಡಲು **70 ಲಕ್ಷ ಗಿಡಗಳನ್ನು** ಬೆಳೆಸಿರುವುದಾಗಿ ತಿಳಿದುಕೊಳ್ಳಲಾಯಿತು.

- ದಿ:20-05-2020 ರಂದು ಸಂಸ್ಥೆಯ **ಕಾರ್ಯಕಾರಿ ಸಮಿತಿ ಸಭೆ** ನಡೆಸಲಾಯಿತು.
- **'ವಿಶ್ವ ಜೇನು ಕೃಷಿ ದಿನಾಚರಣೆ'**ಯನ್ನು ಆಚರಿಸಲಾಯಿತು. **ಡಾ|| ಡಿ. ರಾಜಗೋಪಾಲ್,** ಹಿರಿಯ ಕೀಟ ಶಾಸ್ತ್ರಜ್ಞರು, ನಿವೃತ್ತ ಡೀನ್ (ಸ್ನಾತಕೋತ್ತರ), ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಹಾಗೂ ಜೇನು ತಜ್ಞ **ಶ್ರೀ.ಶಾಂತವೀರಯ್ಯ** ಅವರು ಜೇನು ಕೃಷಿ ಬಗ್ಗೆ ವಿಚಾರ ವಿನಿಮಯ ಮಾಡಿದರು.
- ದಿ: 20-05-2020ರಂದು ಸಂಸ್ಥೆಯ ಜನವರಿ-ಮಾರ್ಚ್ 2020ರ **'ಕೃಷಿವನ'** ತ್ರೈಮಾಸಿಕ ವಾರ್ತಾ ಪತ್ರವನ್ನು ಶ್ರೀ **ಆರ್.ಕೆ.ಸಿಂಗ್,** ಭಾ.ಅ.ಸೇ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅಭಿವೃದ್ಧಿ) ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಬಿಡುಗಡೆ ಮಾಡಿದರು.

2. ದಿ:25-05-2020 ರಂದು ಸಂಸ್ಥೆಯ ಕಾರ್ಯದರ್ಶಿಯವರಾದ **ಶ್ರೀ ಎ.ಎಂ. ಅಣ್ಣಯ್ಯ** ಅವರು ಶ್ರೀಗಂಧ ಬೇಸಾಯದ ಬಗ್ಗೆ ಮಾತನಾಡಿರುವುದನ್ನು ಹಾಸನ ಆಕಾಶವಾಣಿಯಿಂದ (ಎಫ್.ಎಮ್. 102.2) ಬಿತ್ತರಿಸಲಾಯಿತು.

3. ದಿ: 25-05-2020 ರಂದು ಸಂಸ್ಥೆಯ ಸದಸ್ಯ ಹಾಗೂ ಜೇನು ತಜ್ಞ **ಶ್ರೀ.ಶಾಂತವೀರಯ್ಯ** ಇವರು ತುಮಕೂರು ಜಿಲ್ಲೆ, ಶಿರಾದ ಬಳಿ **ಶ್ರೀ ಮಂಜುನಾಥ** ಅವರ ತೋಟದಲ್ಲಿ ಜೇನು ತೆಗೆಯುವ ಬಗ್ಗೆ ಪ್ರಾತ್ಯಕ್ಷಿತೆ ಮಾಡಿ ತೋರಿಸಿದರು.

4. ದಿ:08-06-2020 ಈ ದಿನ **ಬಂಗಾರಪೇಟೆ** ತಾಲ್ಲೂಕು **ಅನಿಗಾನಹಳ್ಳಿಗೆ** ಭೇಟಿ ನೀಡಿ ಆ ಗ್ರಾಮದ ಜಮೀನುಗಳು ಒಣ ಭೂಮಿಗಳಾಗಿದ್ದು ಅಲ್ಲಿ ನೆಡುವ ಮರಗಿಡಗಳ ಬಗ್ಗೆ ಅರಣ್ಯ ಇಲಾಖೆ ಹಾಗೂ ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ ಕಾರ್ಯದರ್ಶಿಗಳು ಚರ್ಚಿಸಿದರು. **ಡಾ.ಎ.ಎನ್.ಎಸ್. ಗೌಡ** ನಿವೃತ್ತ ಡೀನ್, ಚಿಂತಾಮಣಿ ಕೃಷಿ ಕಾಲೇಜು ಕೋಲಾರ ಹಾಗೂ ಕೋಲಾರ ವಿಭಾಗದ ಅರಣ್ಯಾಧಿಕಾರಿಗಳು



ಭಾಗವಹಿಸಿದ್ದರು.

5. ದಿ:13-06-2020 ವಿಶ್ವ ಪರಿಸರ ದಿನದ (ದಿ:05-06-2020) ಅಂಗವಾಗಿ ಕಾರ್ಯದರ್ಶಿ ಹಾಗೂ ನಾಗಮಂಗಲ ಅರಣ್ಯ ಇಲಾಖೆಯೊಡನೆ ಆದಿಚುಂಚನಗಿರಿ ಮಠದ **ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ** ಅವರಿಂದ ಶ್ರೀಗಂಧ ಹಾಗೂ ಬೇವಿನ ಗಿಡಗಳನ್ನು **ಬಾಲಗಂಗಾಧರನಾಥ ನಗರ** (ಬೆಳ್ಳೂರು ಬಳಿ) ಆದಿಚುಂಚನಗಿರಿ ವಿಶ್ವವಿದ್ಯಾಲಯ ಆವರಣದಲ್ಲಿ ನೆಟ್ಟು ಪರಿಸರ ದಿನಾಚರಣೆ ಆಚರಿಸಲಾಯಿತು. ಇಲ್ಲಿ ಬೆಂಗಳೂರು-ಹಾಸನ ಹೆದ್ದಾರಿಯ ಅಕ್ಕಪಕ್ಕ ಮಠದ ವತಿಯಿಂದ ಹಾಗೂ ಅರಣ್ಯ ಇಲಾಖೆಯು ಸೇರಿ ಮರ ನೆಡುತೋಪನ್ನು ಉತ್ತಮವಾಗಿ ನಿರ್ಮಿಸಲಾಗಿದೆ. ಹೆದ್ದಾರಿಯ ಎರಡು ಇಕ್ಕೆಲಗಳಲ್ಲಿ Shelter belt ಆಗಿ ಬಿದಿರು (ಭೀಮ ತಳಿ) ಮರಗಳನ್ನು ಬೆಳೆಸಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹೊಗೆ ಹಾಗೂ ದೂಳಿನ ಮಾಲಿನ್ಯ ಹಾಗೂ ಶಬ್ದ ಮಾಲಿನ್ಯವನ್ನು ತಡೆಗಟ್ಟುವ ಬಗ್ಗೆ ವಿಚಾರ ವಿನಿಮಯ ಮಾಡಲಾಯಿತು. ♦

## ಸದಸ್ಯತ್ವ.

**ಸಂಸ್ಥೆಯ ಸದಸ್ಯತ್ವ ಎನ್ನುವಂತಹದ್ದು ಸಂಸ್ಥೆ / ವೈಯಕ್ತಿವಾಗಿ ಶಾಸ್ತ್ರೀಯ ಅರಣ್ಯೀಕರಣ ಯೋಜನೆಯಲ್ಲಿ ಆಸಕ್ತಿ ಹೊಂದಿದ್ದವರಿಗೆ ತೆರೆದಿರುತ್ತದೆ.**

| ಸದಸ್ಯತ್ವದ ಕ್ರಮ | ಪ್ರವೇಶ ಶುಲ್ಕ |
|---|---|
| ಸಾಂಸ್ಥಿಕ ಸದಸ್ಯತ್ವ | 25,000-00 ರೂ |
| ಆಶ್ರಯದಾತ ಸದಸ್ಯತ್ವ | 20,000-00 ರೂ |
| ಜೀವಮಾನ ಸದಸ್ಯತ್ವ | 5,000-00 ರೂ |
| ಭಾಗೀದಾರ ಸದಸ್ಯತ್ವ | 2,000-00 ರೂ |
| ಸಾಮಾನ್ಯ ಸದಸ್ಯತ್ವ | 100-00 ರೂ |

# ಸುಸ್ಥಿರ ಅಭಿವೃದ್ಧಿಗೆ ಕೋವಿಡ್–19 ಹಾಕಿ ಕೊಟ್ಟ ದಾರಿ

ಕೆ. ಪುಟ್ಟಸ್ವಾಮಿ, ಪರಿಸರ ವಿಜ್ಞಾನ ಬರಹಗಾರರು, ಮೊ:9480638195

ಎ.ಎಂ. ಅಣ್ಣಯ್ಯ, ಕಾರ್ಯದರ್ಶಿ, ಐ.ಎ.ಎಫ್.ಟಿ ಮೊ: 9448019306

**ಪಂ**ಜಾಬ್ ರಾಜ್ಯದ **ಜಲಂಧರ್ ನಗರ**ದ ಜನರು ಈ ವರ್ಷದ ಏಪ್ರಿಲ್ ಮೂರರಂದು ಬೆಳಿಗ್ಗೆ ಎದ್ದಾಗ ಉತ್ತರದ ಕ್ಷಿತಿಜದಲ್ಲಿ ಅನಾವರಣಗೊಂಡ ಅಪೂರ್ವವಾದ ದೃಶ್ಯವೊಂದಕ್ಕೆ ಸಾಕ್ಷಿಯಾದರು. ಆ ನಗರದಿಂದ 243 ಕಿ.ಮಿ ದೂರದ ಹಿಮಾಲಯ ಪರ್ವತಶ್ರೇಣಿಯ ಭಾಗವಾದ **ಧೌಲಾಧರ್ ಪರ್ವತಗಳ** ನಯನ ಮನೋಹರ ದೃಶ್ಯ ಬರಿಗಣ್ಣಿಗೆ ಗೋಚರಿಸಿ ಜನರನ್ನು ಆಶ್ಚರ್ಯದ ಕಡಲಲ್ಲಿ ಮುಳುಗಿಸಿತು. ಅನೇಕ ದಶಕಗಳಿಂದ ಹಿಮಾಚ್ಛಾದಿತ ಪರ್ವತಶೃಂಗಗಳ ದರ್ಶನದಿಂದ ವಂಚಿತವಾಗಿದ್ದ ಜನತೆಗೆ ಅದೊಂದು ಅಪೂರ್ವವಾದ ಪವಾಡ ಸದೃಶ್ಯ ಘಟನೆಯಾಗಿತ್ತು. ಕಳೆದ ನವೆಂಬರ್–ಡಿಸೆಂಬರ್‌ನಲ್ಲಿ ಪಂಜಾಬ್–ಹರಿಯಾಣ ರಾಜ್ಯಗಳಲ್ಲಿ ಎದ್ದ ಮಂಜು ಮಿಶ್ರಿತ ಹೊಗೆಯು ದೇಶದ ರಾಜಧಾನಿ ದೆಹಲಿಯ ಜನರಿಗೆ ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಿತ್ತು. ಆ ನೆನಪು ಜನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವ ಕಾಲದಲ್ಲಿ ಪಂಜಾಬ್ ರಾಜ್ಯದಲ್ಲಿ ವಾಯುಮಾಲಿನ್ಯ ಕಡಿಮೆಯಾಗಿ ದೂರದ ಹಿಮಾಲಯ ಬರಿಗಣ್ಣಿಗೆ ಗೋಚರಿಸುವುದೆಂದರೆ ಪವಾಡವಲ್ಲವೇ?

ಕುತೂಹಲಕಾರಿಯಾದ ಸಂಗತಿಯೆಂದರೆ ಭಾರತವೂ ಸೇರಿದಂತೆ ಇಡೀ ಜಗತ್ತು **ಕೋವಿಡ್–19 ವೈರಸ್** ಹಾವಳಿಯಿಂದ ತತ್ತರಿಸುತ್ತಿದ್ದ ಕಾಲದಲ್ಲಿ ಇಂಥದೊಂದು ಪ್ರಾಕೃತಿಕ ಘಟನೆ ಜರುಗಿತ್ತು. ಮಾರ್ಚ್ 23ರಂದು ದೇಶದಲ್ಲಿ ಸಂಪೂರ್ಣ ಲಾಕ್‌ಡೌನ್ ಜಾರಿಗೆ ಬಂದ ಹತ್ತು ದಿನಗಳಲ್ಲಿಯೇ ಇದು ಸಂಭವಿಸಿತ್ತು. ಇದನ್ನು ಅನುಸರಿಸಿ ಪರಿಸರದ ದೃಷ್ಟಿಯಿಂದ ನಂಬಲಸಾಧ್ಯವಾದ ಪರಿವರ್ತನೆಗಳು ಜರುಗಲಾರಂಭಿಸಿದವು.

ನಿಜ! **ಕೋವಿಡ್–19 ವೈರಸ್** ಸಾಂಕ್ರಾಮಿಕ ರೋಗದ ಎದುರು ಇಡೀ ಜಗತ್ತು ಮಂಡಿಯೂರಿದೆ. ಭಾರತದಂಥ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಪಲ್ಲಟಗಳಾಗಿವೆ. ವಲಸೆ ಕಾರ್ಮಿಕರೂ ಸೇರಿದಂತೆ ಅಸಂಘಟಿತ ಕ್ಷೇತ್ರಗಳ ಕಾರ್ಮಿಕರ, ಬಡಜನರ ಬದುಕು ಮೂರಾಬಟ್ಟೆಯಗಿದೆ. ದೇಶದಾದ್ಯಂತ ಆರ್ಥಿಕ, ಸಾಮಾಜಿಕ ಚಟುವಟಿಕೆಗಳ ಮೇಲೆ ಹೇರಿದ ಮಿತಿಯಿಂದಾಗಿ ಬದುಕು ಕಂಗೆಟ್ಟಿದೆ. ಪ್ರವಾಸೋದ್ಯಮ, ಆತಿಥ್ಯ ಉದ್ದಿಮೆಗಳು ಮುಚ್ಚಿವೆ. ಸೇವಾ ಕ್ಷೇತ್ರ ಕುಸಿದಿದೆ. ಕೋಟ್ಯಾಂತರ ಜನ ನಿರುದ್ಯೋಗಕ್ಕೆ ನೂಕಲ್ಪಟ್ಟಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಭಾರತ ಹಿಂದೆಂದೂ ಅನುಭವಿಸದ ಸಂಕಷ್ಟಗಳಿಗೆ ಸಿಲುಕಿದೆ. ಜನತೆ ಮತ್ತು ಸರ್ಕಾರ ಬಹಳ ಗಂಭೀರವಾದ ಈ ಸಮಸ್ಯೆಯನ್ನು ಒಟ್ಟಾಗಿ ಎದುರಿಸುತ್ತಿದೆ.

ವಿಚಿತ್ರವೆಂದರೆ ಈ ಅಭೂತಪೂರ್ವ ಲಾಕ್‌ಡೌನ್ ಜಾರಿಯು ಪರಿಸರದ ದೃಷ್ಟಿಯಿಂದ ಸಕಾರಾತ್ಮಕ ಪರಿಣಾಮಗಳನ್ನು ಬೀರಿದೆ. ಕೇಂದ್ರ ಸರ್ಕಾರದ ಸಂಸ್ಥೆಯಾದ ವಾಯುಗುಣಮಟ್ಟ ಮತ್ತು ಹವಾಮಾನ ಮುನ್ಸೂಚನೆ ಮಾಪನ ವ್ಯವಸ್ಥೆಯ(SAFAR) ಸಮೀಕ್ಷೆಯ ಪ್ರಕಾರ ಲಾಕ್‌ಡೌನ್ ನಂತರದ ದಿನಗಳಲ್ಲಿ ವಾಯುಮಾಲಿನ್ಯವುಂಟು ಮಾಡುವ ಸೂಕ್ಷ್ಮ ಕಣಗಳ ಪ್ರಮಾಣ ಶೇ. 40ರಷ್ಟು ಮತ್ತು ನೈಟ್ರೋಜನ್ ಆಕ್ಸೈಡ್ ಪ್ರಮಾಣ ಶೇ.40ರಷ್ಟು ಇಳಿ ಮುಖವಾಗಿದೆ. ಕೈಗಾರಿಕೆಗಳ ಚಟುವಟಿಕೆಗಳು ಸ್ತಬ್ಧವಾಗಿ ರಸತ್ಯಾಜ್ಯದ ಹೊರಹರಿವು ನಿಂತಿರುವುದರಿಂದ ಗಂಗಾ, ಯಮುನಾ ನದಿಗಳೂ ಸೇರಿದಂತೆ ದೇಶದ ನದಿಗಳ ನೀರಿನ ಗುಣಮಟ್ಟ ಸುಧಾರಿಸಿದೆ. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಪ್ರಕಾರ ವಲಸೆ ಬರುವ ಫ್ಲೆಮಿಂಗೋ ಹಕ್ಕಿಗಳ ಸಂಖ್ಯೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದುಪ್ಪಟ್ಟಾಗಿದೆ. ಸದಾ ಗೌಜು ಗದ್ದಲದಲ್ಲಿ, ವಾಹನಗಳ ಭರಾಟೆಯ ಸದ್ದಿನಲ್ಲಿ ತುಂಬಿಹೋಗಿದ್ದ ನಗರಗಳಲ್ಲಿ ನಾಗರಿಕರಿಗೆ ಈಗ ಹಕ್ಕಿಗಳ ಕಲರವ ಮುಂಜಾನೆಯಿಂದಲೇ ಕೇಳಿಸುತ್ತದೆ. ಬಗೆಬಗೆಯ ಹಕ್ಕಿಗಳ ಇರುವನ್ನು ಜನ ಈಗ ಗುರುತಿಸುತ್ತಿದ್ದಾರೆ. ವಾಹನ ಮತ್ತು ಜನಸಂಚಾರ ಹಾಗೂ ಚಾರಣ, ಪ್ರವಾಸೋದ್ಯಮಕ್ಕೆ ಕಡಿವಾಣ ಬಿದ್ದ ಪರಿಣಾಮ ಅರಣ್ಯ ಮತ್ತು ವನ್ಯಜೀವಿಗಳು ಪುನಶ್ಚೇತನಗೊಳ್ಳುತ್ತಿರುವ ವರದಿಗಳು ಬರುತ್ತಿವೆ,

ಇದಲ್ಲದೆ ಸಾಮಾಜಿಕ ಬದುಕಿನಲ್ಲಿಯೂ ಅನೇಕ ಬದಲಾವಣೆಗಳು ಸಂಭವಿಸಿವೆ. ಬದುಕು ಈಗಿನ ಧಾವಂತವನ್ನು ಬಿಟ್ಟು ಹಿಂದಿನ ಸಾವಧಾನದ ರೀತಿಗೆ ಹೊರಳಿದೆ. ವಾಹನ ದಟ್ಟಣೆ ಇಳಿಮುಖವಾಗಿದೆ. ಸರಳವಾದ ಜೀವನಶೈಲಿ ಮತ್ತು ಆರೋಗ್ಯಪೂರ್ಣ ಆಹಾರ ಸೇವನೆಯಿಂದ ಸಾಮಾನ್ಯ ರೋಗಗಳ ಪ್ರಕರಣಗಳ ಸಂಖ್ಯೆ ಕುಸಿದಿದೆ. ಲಾಕ್‌ಡೌನ್ ಹೇರಿದ ಮಿತಿಯಿಂದಾಗಿ ಕುಟುಂಬದ ಸದಸ್ಯರ ನಡುವಣ ಬಾಂಧವ್ಯ ವೃದ್ಧಿಸಿದೆ. ಜನರು ಕ್ರಿಯಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೊಸದನ್ನು ಕಲಿಯುವ ಉತ್ಸಾಹ ತೋರಿಸುತ್ತಿದ್ದಾರೆ. ಮನೆಯಲ್ಲಿಯೆ ಗಿಡಬೆಳೆಸುವ, ಹಕ್ಕಿಗಳನ್ನು ಪಾಲಿಸುವ, ತೋಟಗಾರಿಕೆ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳುತ್ತಿದ್ದಾರೆ.

ಪಳೆಯುಳಿಕೆ ಇಂಧನ ಬಳಕೆಯ ಪ್ರಮಾಣ ತಗ್ಗಿದ ಪರಿಣಾಮ ಮಾಲಿನ್ಯ ನಿಯಂತ್ರಣ ಹಾಗು ಅರಣ್ಯ ಮತ್ತು ಜೀವಸಂಕುಲಗಳ ಪುನಶ್ಚೇತನವು **ಕೋವಿಡ್–19 ವೈರಸ್** ಹಾವಳಿಯು ಸೃಷ್ಟಿಸಿರುವ ಸಕಾರಾತ್ಮಕ ಪರಿಣಾಮಗಳು. ಆದರೆ ಇದು ಮನುಷ್ಯರ ಪ್ರಾಣಬಲಿ ಮತ್ತು ಆರ್ಥಿಕ ದುಸ್ಥಿತಿಯಂತಹ ಮಾನವೀಯ ಬಿಕ್ಕಟ್ಟುಗಳಿಂದ ಉದ್ಭವಿಸಿದ ಪರಿಣಾಮಗಳು. ಹಾಗಾಗಿ ಈ ಪರಿಣಾಮಗಳು ನಮ್ಮ ಅಭಿವೃದ್ಧಿಯ ನಮೂನೆಗಳಲ್ಲಿರುವ ವಿಪರ್ಯಾಸಗಳನ್ನು ಬಹಿರಂಗಗೊಳಿಸಿದೆ. ಇದರಿಂದ ನಿಸರ್ಗಲಯಗಳೊಡನೆ ಹೊಂದಿಕೊಂಡು ಬಾಳುವಂಥ ಸುಸ್ಥಿರ ಅಭಿವೃದ್ಧಿಯ ಆದ್ಯತೆಗಳನ್ನು ಯೋಜನೆಗಳಲ್ಲಿ ಅಳವಡಿಸಬೇಕಾದ ಒತ್ತಾಯವನ್ನು ಈಗಿನ ಪರಿಸ್ಥಿತಿ ಸೂಚಿಸಿದೆ. ಅದನ್ನು ಮನನ ಮಾಡಿಕೊಳ್ಳುವ ತುರ್ತು ಉದ್ಭವಿಸಿದೆ. ಅರಣ್ಯ, ಪರಿಸರ, ಜೀವಸಂಕುಲಗಳ ಸಂರಕ್ಷಣೆಯ ಹಿನ್ನೆಲೆಯಲ್ಲಿಯೇ ಯಾವುದೇ ಬೆಳವಣಿಗೆ ಮತ್ತು ಅಭಿವೃದ್ಧಿಯ ಪರಿಕಲ್ಪನೆಗಳನ್ನು ಮರುವ್ಯಾಖ್ಯಾನಗೊಳಿಸಬೇಕಾದ ಚಿಂತನೆಯ ಪರ್ವವೊಂದನ್ನು **ಕೊರೋನಾ ವೈರಸ್** ಉದ್ಘಾಟಿಸಿದೆ.

ಮಾನವ ಚಟುವಟಿಕೆಗಳ ಮೇಲೆ **ಕೋವಿಡ್–19** ಹಾವಳಿಯು ಹೇರಿದ ಮಿತಿಗಳು ಸೃಷ್ಟಿಸಿದ ಪರಿಸರ **ಸಕಾರಾತ್ಮಕವಾಗಿ ಉಂಟಾದ ಧನಾತ್ಮಕ ಬದಲಾವಣೆಗಳು** ಅದರ ಹಾವಳಿ ಮುಗಿದ ನಂತರವೂ ಮುಂದುವರಿಯಲು ಆಗಬೇಕಾದ ಚಿಂತನೆಗಳ ಬಗ್ಗೆ ಚರ್ಚೆ ನಡೆಯಬೇಕು. ಪರಿಸರ ಮತ್ತು ಅಭಿವೃದ್ಧಿಯ ನಡುವಿನ ಚರ್ಚೆ ಎಂದೂ ಮುಗಿಯುವಂಥದ್ದಲ್ಲ. ಆದರೆ ಈಗ ನಮ್ಮ ಮುಂದಿರುವುದು, ಒಂದು ಪರಿಸರ ಉಳಿಯಬೇಕು, ಇಲ್ಲವೇ ಪರಿಸರ,

–9ನೇ ಪುಟಕ್ಕೆ...

# ಜೇನು ಸಾಕಾಣಿಕೆ: ಕೃಷಿ–ತೋಟಗಾರಿಕೆ ಬೆಳೆಗಳಲ್ಲಿ ಲಾಭ ತರಬಹುದಾದ ಉದ್ಯಮ

ಎಸ್.ಎಂ. ಶಾಂತವೀರಯ್ಯ, ಮೇಟಿಕುರ್ಕೆ, ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ.
ಮೊ: 944726068, Email: chandanamadhuvana@gmail.com

ಪ್ರತಿ ವರ್ಷ ಮೇ 20ರಂದು ವಿಶ್ವ ಜೇನು ದಿನಾಚರಣೆ ಆಚರಿಸಲಾಗುತ್ತದೆ. ನಮ್ಮ ಬದುಕಿನಲ್ಲಿ ಅನೇಕ ನಾಣ್ಣುಡಿಗಳನ್ನು ಸಂದರ್ಭೋಚಿತವಾಗಿ ಬಳಸುತ್ತೇವೆ. ನಾಣ್ಣುಡಿಗಳ ಸೃಷ್ಟಿಗೆ ಪರಿಸರವೇ ಮೂಲ ಆಶಯ. ಪರಿಸರದಲ್ಲಿ ಕಂಡುಬರುವ ಇರುವೆ, ಕಾಗೆ, ಜೇನುನೊಣಗಳಲ್ಲಿರುವ ಸಾಮಾಜಿಕ ಜೀವನವನ್ನು ಮನುಷ್ಯರ ಬದುಕಿನಲ್ಲಿ ಏತಕ್ಕಾಗಿ ಕಂಡು ಬರುತ್ತಿಲ್ಲವೆನ್ನುವ ಕೊರಗಿದೆ. ಆದರೆ ಹಲವು ಸಂದರ್ಭಗಳಲ್ಲಿ ಮನುಷ್ಯನ ವರ್ತನೆ ಪ್ರಾಣಿ, ಪಕ್ಷಿಗಳಿಗಿಂತ ಕೀಳಾಗಿರುತ್ತದೆ. ಇಲ್ಲಿ ಉಲ್ಲೇಖ ಬಯಸುವ ನಾಣ್ಣುಡಿಯೆಂದರೆ **"ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ"** ಎನ್ನುವುದಾಗಿದೆ. ಆದರೆ ಇಲ್ಲಿ ಗಮನಿಸ 'ಬೇಕಾದದ್ದು, ಜೇನಿನ ಸವಿಯನ್ನು ಸಜ್ಜನರ ಸಹವಾಸಕ್ಕೆ ಹೋಲಿಸಲಾಗಿದೆ. ಜೇನುನೊಣ ಸಂಗ್ರಹಿಸುವ ಜೇನು ತುಪ್ಪಕ್ಕೆ ಅಷ್ಟೇ ಜೇನುನೊಣವನ್ನು ಸೀಮಿತಗೊಳಿಸದೆ, ಅದು ತನ್ನ ಬದುಕಿನಲ್ಲಿ ಅದೆಷ್ಟೋ ಹೂಗಳನ್ನು ಸಂಪರ್ಕಿಸಿ, ಅದರಿಂದ ಮಕರಂದವನ್ನು ಹೀರಿ, ಜೇನುತುಪ್ಪವಾಗಿ ಪರಿವರ್ತಿಸುವುದು. ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು, ಕಾಳು ಕಟ್ಟಲು ಸಹಾಯಕವಾಗಿ, ಮಾನವನ ಬದುಕಿಗೆ ದಾರಿ ದೀಪವಾಗಿದೆ. ಕೆಲವು ಬೆಳೆಗಳು ಕೀಟಗಳ ಪರಾಗಸ್ಪರ್ಶವಿಲ್ಲದೆ ಕಾಳು ಕಟ್ಟುವುದಿಲ್ಲ. ಇಂತಹ ಮಹದುಪಕಾರಿಯಾದ ಜೇನು ನೊಣಗಳನ್ನು ಕೃಷಿ ಮತ್ತು ತೋಟಗಾರಿಕಾ ಬೆಳೆಂಯೊಂದಿಗೆ ಸಾಕುವುದರಿಂದ ಮೊದಲನೆಯದಾಗಿ ನಾವು ಬೆಳೆಯುವ ಬೆಳೆಯಲ್ಲಿ ಇಳುವರಿ ಹೆಚ್ಚಿಸಲು ಹಾಗೂ ಎರಡನೆಯದಾಗಿ ಅತ್ಯುತ್ತಮವಾದ ಔಷಧ ಮತ್ತು ಆಹಾರವಾದ ಜೇನುತುಪ್ಪವನ್ನು ದಯಪಾಲಿಸುತ್ತದೆ.

ಜೇನುಗಳಲ್ಲಿ ಅನೇಕ ವಿಧಗಳಿವೆ, ಹೆಜ್ಜೇನು, ಕೋಲ್ಜೇನು, ತುಡುವೆ ಜೇನು ಮತ್ತು ಮಿಸರಿ ಜೇನು ಪ್ರಭೇದಗಳಿವೆ (ತಳಿಗಳು). ಭಾರತದಲ್ಲಿ ಅನಾದಿ ಕಾಲದಿಂದಲೂ ಇವೆ. ಯೂರೋಪಿಯನ್ ತಳಿ ಮೆಲ್ಲಿಫೆರಾ ಜೇನು ತಳಿ ನಮ್ಮಲ್ಲಿರಲಿಲ್ಲ. ಸರ್ವಜ್ಞರು ಬೇರೆ ಎಲ್ಲಾ ಜೇನು ತಳಿಗಳನ್ನು ಬಿಟ್ಟು ಹೆಜ್ಜೇನನ್ನು ಹೇಳಿದ್ದಾರೆ. ಹಿಂದೆ ಸರ್ವಜ್ಞರು ಇದ್ದ ಕಾಲದಲ್ಲಿ ಜನಸಂಖ್ಯೆ ಕಡಿಮೆಯಿತ್ತು. ಬಹುಶಃ ಹಿಂದೆ ಕಾಡು ಹೆಚ್ಚಿನ ಪ್ರದೇಶದಲ್ಲಿದ್ದುದರಿಂದ ಹೆಜ್ಜೇನು ಎಲ್ಲೆಡೆಯೂ ಗೂಡು ಕಟ್ಟುತ್ತಿರಬಹುದು. ಇದರಲ್ಲಿರುವ



ಅಸಂಖ್ಯಾತ ಜೇನು ನೊಣಗಳು ಜೇನು ಸಂಗ್ರಹಿಸುವುದರೊಂದಿಗೆ ಅನೇಕ ಗಿಡ ಮರಗಳ, ಕೃಷಿ ಬೆಳೆಗಳಲ್ಲಿ ಪರಾಗಸ್ಪರ್ಶ ಕ್ರಿಯೆಯಲ್ಲಿ ತೊಡಗಿಸಿಕೊಂಡು, ಮರಗಳಲ್ಲಿ ಹಣ್ಣು ಮತ್ತು ಬೀಜವಾಗಲು, ಕೃಷಿ ಬೆಳೆಯಲ್ಲಿ ಹೆಚ್ಚಿನ ಕಾಳು ಕಟ್ಟುವಂತೆ ಮಾಡಿ, ಕೃಷಿ ಬೆಳೆಯ ಇಳುವರಿಯನ್ನು ದ್ವಿಗುಣಗೊಳಿಸುತ್ತವೆ.

ಹೆಜ್ಜೇನಿನಲ್ಲಿ ತೇವಾಂಶ ಸಾಮಾನ್ಯವಾಗಿ ಉಳಿದ ತಳಿಯ ಜೇನುಗಳಿಗಿಂತ ಜಾಸ್ತಿ ಇರುತ್ತದೆ, ಹಾಗಾಗಿ ಬೇಗ ಹುಳಿ ಬರುತ್ತದೆ (ದಯವಿಟ್ಟು ಪೂರ್ಣ ಚಂದ್ರ ತೇಜಸ್ವಿಯವರ ಕಾದಂಬರಿ **ಕರ್ವಾಲೋ** ಓದಿರಿ). ಆದರೆ ಜೇನಿನೊಂದಿಗೆ ಹಸಿ ಹಸಿ ಪರಾಗ ಮಿಶ್ರವಾಗಿರುತ್ತದೆ. ಆದ್ದರಿಂದ ಹೆಜ್ಜೇನಿನ ರುಚಿ ಉಳಿದ ತಳಿಯ ಜೇನುಗಳಿಗಿಂತ ವಿಶಿಷ್ಟವಾಗಿರುತ್ತದೆ. ಅದಕ್ಕೆ ಇರಬೇಕು **ಸರ್ವಜ್ಞ ಮಹಾಕವಿ ಹೆಜ್ಜೇನನ್ನು** ಉಲ್ಲೇಖಿಸಿರುವುದು.

ಇತ್ತೀಚಿನ ದಿನಗಳಲ್ಲಿ ಶ್ರೀಗಂಧದ ಬಗ್ಗೆ ಅನೇಕರು ಬಹಳ ಆಸಕ್ತಿ ವಹಿಸಿ ಹೆಚ್ಚು ಜಮೀನು ಇರುವಂತ ಅನೇಕ ರೈತರು ಶ್ರೀಗಂಧ ವನ್ನು ಬೆಳೆಯುತ್ತಿದ್ದಾರೆ. ಇದು ಒಂದೇ ಬಾರಿಗೆ ಹೆಚ್ಚು ಆದಾಯವನ್ನು ತರುವಂತ ಬೆಳೆ, ಆದರೆ ಜೇನು ಸಾಕಾಣಿಕೆಯು ಪರಿಸರ ಸಂರಕ್ಷಣೆ ದೃಷ್ಟಿಯಿಂದ, ನಿರುದ್ಯೋಗ ನಿವಾರಣೆಗಾಗಿ, ಪೋಷಕಾಂಶ ಕೊರತೆಯನ್ನು ನಿವಾರಿಸುವಲ್ಲಿ ಮತ್ತು ನೈಸರ್ಗಿಕ ಮನೆ ಮದ್ದಾಗಬಲ್ಲ ಇಷ್ಟೆಲ್ಲಾ ಮಹತ್ವವನ್ನು ಹೊಂದಿರುವ ಜೇನು ಸಾಕಾಣಿಕೆ ಬಗ್ಗೆ ಜನರು ಏತಕ್ಕಾಗಿ ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲ ವೆನ್ನುವುದರ ಬಗ್ಗೆ ಎಲ್ಲರೂ ಗಮನ ಹರಿಸಬೇಕಾಗಿದೆ. ಇಲ್ಲಿ ಗಮನಿಸಬೇಕಾದ ಮಹತ್ವದ ವಿಚಾರವೆಂದರೆ, ಜೇನುನೊಣಗಳ ವಾಸಕ್ಕೆ ಬೇಕಾದ ಸ್ಥಳವನ್ನು ಒದಗಿಸಿದರೆ ಅಂದರೆ ಜೇನು ಪೆಟ್ಟಿಗೆಯನ್ನು ನೀಡಿದರೆ ಸಾಕು ಬಾಕಿ ಉಳಿದ ಎಲ್ಲಾ ಕೆಲಸಗಳನ್ನು ಜೇನುನೊಣಗಳೇ ನೋಡಿಕೊಳ್ಳುತ್ತವೆ. ಸಾಕುವುದು ಅಂದರೆ ನಾವುಗಳು ಸಾಕಬೇಕಾಗಿಲ್ಲ. ಕೋಶದಿಂದ ಹೊರಬಂದ ಪ್ರತಿ ಜೇನುನೊಣಕ್ಕೂ ಮುಂದಿನ ತನ್ನ ಜೀವಿತಾವಧಿಯಲ್ಲಿ ಏನೇನು ಮಾಡಬೇಕೆಂದು ತಿಳಿದಿರುತ್ತದೆ. ಮೆಸ್ ಕಟ್ಟುತ್ತೆ, ಮರಿಗಳನ್ನು ಸಾಕುತ್ತೆ, ಆಹಾರ ತರುತ್ತವೆ, ಶತ್ರು ನಿಗ್ರಹ ಮಾಡುತ್ತವೆ. ಶುಚಿತ್ವವನ್ನು ಕಾಪಾಡಿಕೊಳ್ಳುತ್ತವೆ, ಯಾವ ಪ್ರಲೋಭನೆಯೂ ಇಲ್ಲದೆ ವಯಸ್ಸಿಗನುಗುಣವಾಗಿ 10–12 ಕರ್ತವ್ಯಗಳನ್ನು ಮಾಡುತ್ತಾ ಚಲನಾಂಗಗಳು ಸೋತ ಮೇಲೆ ತನ್ನ ಗೂಡಿನಿಂದ ಹೊರಬಂದು ಎಲ್ಲೋ ಬಿದ್ದು ಬೇರೆ ಕೀಟಗಳಿಗೆ (ಇರುವೆ) ಆಹಾರ ವಾಗುತ್ತದೆ. ಏಕೆಂದರೆ ಒಳಗೆ ಬಿದ್ದರೆ ತನ್ನ ಸಹೋದರರಿಗೆ ಶವವನ್ನು ಹೊರಗೆಸೆಯುವ ಕೆಲಸ ಬೇಡ ಎಂದು. ಯೋಚಿಸಬೇಕಾದ ವಿಷಯ ವೆಂದರೆ, ಅವುಗಳು ಬದುಕಿದ್ದಾಗ ಅಷ್ಟೇ ಅಲ್ಲದೆ ಸತ್ತ ನಂತರವೂ ನಿರ್ವಹಿಸುವ ಪರೋಪಕಾರದ ಕೆಲಸ ಅವಿಸ್ಮರಣೀಯವಾದದ್ದು.

ಶ್ರೀಗಂಧವನ್ನು ರಕ್ಷಿಸಲು ಅಥವಾ ಕಳವು ನಿಯಂತ್ರಿಸಲು ವಿದ್ಯುತ್ ಬೇಲಿ, ಇಲೆಕ್ಟ್ರಾನಿಕ್ ಚಿಪ್ಸ್, ಸಿಸಿಟಿವಿ ಮುಂತಾದ ಸಲಕರಣೆಗಳ ಅವಶ್ಯಕತೆಯಿದೆ. ಆದರೆ ಜೇನು ಸಾಕಾಣಿಕೆಗೆ ಅವುಗಳನ್ನು ಹಿಡಿದಿಡುವ ಕೌಶಲ್ಯವೇ ಒಂದು ಬಹು ದೊಡ್ಡ ಬಂಡವಾಳ. ಪೆಟ್ಟಿಗೆಗಳನ್ನು ರಿಯಾಯಿತಿ ದರದಲ್ಲಿ ತೋಟಗಾರಿಕೆ ಅಲ್ಲದೆ ಬೇರೆ ಮೂಲಗಳಿಂದಲೂ ದೊರೆಯುತ್ತವೆ. ಯಾವ ರಿಯಾಯಿತಿಯೂ ಇಲ್ಲದೆ ಸಶಕ್ತರಾದ, ಅರಣ್ಯ, ಕೃಷಿ, ತೋಟಗಾರಿಕೆ, ಜಲಾನಯನ ಅಷ್ಟೇಕೆ ಎಲ್ಲಾ ನಿವೃತ್ತ ನೌಕರರೂ ಜೇನು ಕೃಷಿಯನ್ನು ಆತ್ಮೋದ್ಧಾರಕ್ಕಾಗಿ, ರಾಷ್ಟ್ರೋದ್ಧಾರಕ್ಕಾಗಿ, ಹವ್ಯಾಸವಾಗಿ, ಕುಟೀರೋದ್ಯಮವಾಗಿ ಮಾಡಬೇಕು. ಕರ್ನಾಟಕದಲ್ಲಿ ಸುಮಾರು 3 ಕೋಟಿ ಜೇನು ಕುಟುಂಬಗಳಿಗಾಗುವಷ್ಟು ಆಹಾರವಿದು. ಪ್ರತಿವರ್ಷ ಹೂ ಬಾಡಿದಂತೆ ವ್ಯರ್ಥವಾಗುತ್ತಿದೆ. ಸದ್ಯ 1000 ಜೇನು ಗೂಡುಗಳು ಕೂಡ ಇಲ್ಲಿವೆ.

ಜೇನು ಕೃಷಿ ಬಗೆಗೆ ಏನೇ ಮಾಹಿತಿ ಬೇಕೆಂದರೂ ಯಾವುದೇ ಸಮಯದಲ್ಲಾದರೂ ನನ್ನನ್ನು ಸಂಪರ್ಕಿಸಿ, ನಾನು ಸದಾ ನಿಮ್ಮ ಸೇವೆಯಲ್ಲಿರ ಬಯಸುವೆ. ♦

–5ನೇ ಪುಟದಿಂದ...

ಮೇಲೆ ನಮ್ಮ ರಾಜ್ಯದಲ್ಲಿಯೂ ಸಹ ಎರಡು ಮೂರು ಸ್ಥಳಗಳಲ್ಲಿ ಇವುಗಳನ್ನ ಲೋಕಸ್ಟ್‌ಗಳು ದಾಳಿ ಮಾಡುತ್ತಿವೆ ಎಂದು ವರದಿಯಾಗಿತ್ತು.

ಕೋಲಾರ ಮತ್ತು ಮೊಳಕಾಲ್ಮೂರು ಪ್ರಾಂತ್ಯಗಳಲ್ಲಿ ಮಿಡತೆಗಳು ಆಸರೆ ಸಸ್ಯಗಳಾದ ಎಕ್ಕದ ಗಿಡಗಳಲ್ಲಿ ಸುಮಾರು ನೂರಾರು ಸಂಖ್ಯೆಯಲ್ಲಿ ಕಂಡ ನಂತರ ಲೋಕಸ್ಟ್ ಬಂದಿದೆಯೆಂದು ಗಾಬರಿಗೊಂಡು ಅಲ್ಲಿನ ಜನರು ಆತಂಕಕ್ಕೆ ಒಳಗಾಗಿದ್ದರು. ಎಕ್ಕದ ಮಿಡತೆಯನ್ನು **ಪೊಯಿಸಿಲೊಸೆರಸ್ ಪಿಕ್ಟಸ್** ಎಂಬ ಪ್ರಭೇದವು ಎಕ್ಕದ ಗಿಡಗಳನ್ನು ಮಾತ್ರ ಹಾನಿ ಮಾಡುತ್ತದೆಂದು ಗೊತ್ತಾಗಿದೆ. ಅದೇ ರೀತಿಯಲ್ಲಿ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಪ್ಲಾಂಟೇಶನ್ ಬೆಳೆಗಳನ್ನು ಹಾನಿ ಮಾಡುತ್ತಿರುವ ಕಾಫಿ ಮಿಡತೆ ***ಔಲಾರ್ಕಿಸ್ ಮಿಲಿಯಾರಿಸ್*** ಸಹ ಲೋಕಸ್ಟ್ ಗುಂಪಿಗೆ ಸೇರಿರುವುದಿಲ್ಲ. ಇವುಗಳು ಗುಂಪಾಗಿ ವಲಸೆ ಹೋಗುವುದಿಲ್ಲ. ಮತ್ತೊಂದು ಪ್ರಭೇದ ಮಳೆಗಾಲದಲ್ಲಿ **ಡೆಕ್ಕನ್ ಪ್ಲಾಟ್ಯೂ** ಎಂದರೆ ಉತ್ತರ ಕರ್ನಾಟಕ, ಮಹಾರಾಷ್ಟ್ರ ಭಾಗಗಳ ಜೋಳ ಬೆಳೆಯುವ ಪ್ರದೇಶಗಳಲ್ಲಿ **ಡೆಕ್ಕನ್ ವಿಂಗ್‌ಲೆಸ್ ಗ್ರಾಸ್‌ಹಾಪರ್ ಕೊಲಿಮೇನಿಯಾ ಸ್ಪಿನರಾಯಿಡಿಸ್** ಎಂಬ ರೆಕ್ಕೆಗಳಿಲ್ಲದ ಮಿಡತೆ ತೀವ್ರ ಪ್ರಮಾಣದಲ್ಲಿ ಜೋಳದ ಬೆಳೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಸಹ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡರೂ, ರೆಕ್ಕೆಗಳಿಲ್ಲದಿರುವುದರಿಂದ **'ಲೋಕಸ್ಟ್'** ಎಂದು ಕರೆಯುವಂತಿಲ್ಲ. ಸ್ಥಳೀಯ ಮಿಡತೆಯಾದ್ದರಿಂದ ನಿಯಂತ್ರಣಾ ಕ್ರಮಗಳನ್ನು ಅನುಸರಿಸುವುದು ಅಸಾಧ್ಯವೇನಲ್ಲ.

■

– 7ನೇ ಪುಟದಿಂದ...

ಅರಣ್ಯಗಳನ್ನು ನಿರ್ಲಕ್ಷಿಸಿ ಅಭಿವೃದ್ಧಿ ಸಾಧಿಸಬೇಕು ಎಂಬ ಏಮ್ಮುಖ ಆಯ್ಕೆಯ ಪ್ರಶ್ನೆಯಲ್ಲ ಎಂಬುದನ್ನು ಅರಿಯಲು ಇದು ಸರಿಯಾದ ಸಮಯ. ಎರಡನ್ನು ಸಮತೋಲನದಲ್ಲಿರಿಸಿ **ಸುಸ್ಥಿರ ಅಭಿವೃದ್ಧಿ ಸಾಧಿಸುವ** ಯೋಜನಾ ತಂತ್ರವಿಧಾನಗಳ ಹುಡುಕಾಟ ಈಗ ತುರ್ತಾಗಿ ಆಗಬೇಕಿರುವ ಕೆಲಸ. ಅದಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಗೌರವಿಸುವ ಅವುಗಳ ಸಂರಕ್ಷಣೆಗೆ ಕಾಳಜಿ ತೋರಿಸುವ ಪ್ರಾಮಾಣಿಕ ಯೋಜನೆಗಳು ತಯಾರಾಗಬೇಕು. **ಕೊರೋನೋ ಸಾಂಕ್ರಾಮಿಕವು** ಉತ್ತಮ ಭವಿಷ್ಯಕ್ಕೆ ಅಸ್ತಿಭಾರ ಹಾಕಲು ಒದಗಿಸಿರುವ ಅವಕಾಶವನ್ನು ಕೈಚೆಲ್ಲಬಾರದು.

ಮುಖ್ಯವಾಗಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಕನಿಷ್ಠ ಪ್ರಮಾಣಕ್ಕೆ ಮಿತಿಗೊಳಿಸುವಂಥ ಸರಳ ಶೈಲಿಯ ಬದುಕನ್ನು ರೂಪಿಸುವ ನಿಟ್ಟಿನಲ್ಲಿ ನಮ್ಮ ಯೋಜನೆಗಳಲ್ಲಿ ಆದ್ಯತೆ ದೊರೆಯಬೇಕು. ಭೂಗ್ರಹದಲ್ಲಿ ದೊರೆಯುವ **ಬಹುಮುಖ್ಯ ನೈಸರ್ಗಿಕ ಸಂಪನ್ಮೂಲಗಳೆಂದರೆ, ಗಾಳಿ, ನೀರಿನ ಮೂಲಗಳು, ಮಣ್ಣು, ಮತ್ತು ಅರಣ್ಯ. ಈ ನಾಲ್ಕು ಜೈವಿಕ ಸಂಪನ್ಮೂಲಗಳು** ಒಂದು ನಿಕಟವಾದ ಜೀವಸಂಬಂಧಗಳಿಂದ ಪರಸ್ಪರ ಬಂಧಿಯಾಗಿವೆ. ಅದರಲ್ಲೂ ಈ ನಾಲ್ಕು ಘಟಕಗಳ ಸಮತೋಲನೆ ಮತ್ತು ಸೌಹಾರ್ದ ಸಂಬಂಧ ಗಟ್ಟಿಯಾಗಲು ಅರಣ್ಯ ಒಂದು ಸೂಕ್ಷ್ಮ ಹಾಗು ಪ್ರಮುಖ ಕೊಂಡಿಯಾಗಿದೆ. ಈ ಸಮತೋಲನದಲ್ಲಿ ಏರುಪೇರಾದರೆ ಅರಣ್ಯ ಅದನ್ನು ತನ್ನ ಸ್ವರೂಪದಲ್ಲಿ ಅಭಿವ್ಯಕ್ತಿಸುತ್ತದೆ. ಮನುಕುಲಕ್ಕೆ ಎಚ್ಚರಿಕೆ ನೀಡುತ್ತದೆ. ಹಾಗೆ ನೋಡಿದರೆ ಅರಣ್ಯ ಮತ್ತು ಮರಗಳು ಉಳಿದ ಮೂರು ನೈಸರ್ಗಿಕ ಸಂಪನ್ಮೂಲಗಳನ್ನು ಆರೋಗ್ಯ ಹಾಗೂ ಸುಸ್ಥಿತಿಯಲ್ಲಿಡಲು ನೆರವಾಗುತ್ತವೆ. ಈ ಹಿನ್ನೆಲೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸಲು ಮತ್ತು ಸಂಪನ್ಮೂಲಗಳು ಬರಿದಾಗದಂತೆ ತಡೆಯಲು **ವನತೋಟಗಾರಿಕೆ, ಅರಣ್ಯಕೃಷಿ, ತೋಟಗಾರಿಕೆ, ರೇಷ್ಮೆ ಬೇಸಾಯ, ಸಾವಯವ ಆರಂಭ, ಜೇನುಸಾಕಣೆ, ಪಶುಸಂಗೋಪನೆ, ಸಮಗ್ರ ಕೃಷಿ** ಚಟುವಟಿಕೆ ಇತ್ಯಾದಿ ಬೇಸಾಯ ಸಂಬಂಧದ ಚಟುವಟಿಕೆಗಳು ಮನುಕುಲಕ್ಕೆ ನೆರವಾಗುತ್ತವೆ. **ಸುಸ್ಥಿರ ಅಭಿವೃದ್ಧಿಗೆ** ಇದುವೇ ಸುಗಮವಾದ ದಾರಿ.

♦

# ಕರೋನಾ ಕಲಿಸಿದ ಪಾಠ

ವಿಶ್ವವೇ ಅಂಗೈಯಲಿದೆ ಎಂದು ಮೆರೆಯುತ್ತಿದ್ದ,
ಉಸಿರು ನಿಂತೊಡನೆ ಮಣ್ಣಾಗುವ ದೇಹಕೆ
ಮಣಗಟ್ಟಲೆ ಬಂಗಾರದೊಡವೆ ಅಲಂಕರಿಸುತ್ತಿದ್ದ,
ಧನಮೋಹದಿಂದ ಮೋಸ–ವಂಚನೆ–ಕಪಟವನೆ
ಉಸಿರಾಡುತ್ತಿದ್ದ,
ಓ ಮಾನವ! ಎಲ್ಲಿ ಹೋಯಿತು ನಿನ್ನ ಅಟ್ಟಹಾಸ..

ಜನಸೇವೆಯ ಹೆಸರಲಿ ಮುಕ್ಕುತ್ತಿದ್ದ,
ಧರ್ಮ–ಜಾತಿ–ಭಾಷೆ ಹೆಸರಲಿ ವಿಕೃತಿ
ಮೆರೆಯುತ್ತಿದ್ದ,
ಮಹಿಳೆಯರು–ಅಶಕ್ತರ ರಕ್ಕಸನಾಗಿ ಶೋಷಿಸುತ್ತಿದ್ದ,
ಬಡವನ ಅಸ್ಪೃಶ್ಯನಾಗಿ ಕಾಡುತ್ತಿದ್ದ,
ನಿನಗೆ ಪಾಠ ಕಲಿಸಲೇ ಈ ವೈರಸ್ ಬಂದಿತೇ ?

ಗಾಳಿಯಲಿ, ಉಗುಳಿನಲಿ, ಮುಟ್ಟಿದಲಿ
ಕಾಡುವ ಕರೋನಾ ವೈರಸ್ ಹಾವಳಿ,
ನಿನ್ನ ದುಷ್ಟತನದ ಅಂತ್ಯಕ್ಕೆ
ಆ ದೇವರು ನೀಡಿದ ಶಾಪವೇ ?

ವೈರಸ್ ಹಾವಳಿಗೆ ಮಕ್ಕಳು, ಹಿರಿಯರೆನ್ನದೇ
ಸಿಲುಕಿ ನಲುಗಿದ್ದಾರೆ, ಮರುಗಿದ್ದಾರೆ
ಸರ್ಕಾರ ನೀಡುವ ಎಲ್ಲಾ ಚಿಕಿತ್ಸೆಗಳ ನಂತರವೂ
ಹಲವು ದುರದೃಷ್ಟ ವಂತರು ಜೀವ ತ್ಯಜಿಸಿದ್ದಾರೆ...

ಕರೋನಾ ವೈರಸ್ ಜಾತಿ–ಧರ್ಮ ಬೇಧವಿಲ್ಲದೇ
ಕಾಡಿಸುತಿದೆ ಅನುದಿನ; ಅನುಕ್ಷಣ
ವೈರಸ್ ಕಲಿಸಿದೆ ಸಾಮಾಜಿಕ ಜಾಗೃತಿಯ ಪಾಠ...
ಸ್ವಚ್ಛತೆ, ಸಾಮಾಜಿಕ ಅಂತರದ ಅಂಕಗಣಿತ...

ಮುಖಕ್ಕೆ ಮಾಸ್ಕ್ ಕಡ್ಡಾಯವಾಗಿ ಧರಿಸೋಣ,
ಸಾಮಾಜಿಕ ಅಂತರ ಅನುಕ್ಷಣ ಪಾಲಿಸೋಣ,
ಗೃಹ ಪ್ರವೇಶ, ನಾಮಕರಣ, ಮದುವೆ,
ಶವಸಂಸ್ಕಾರ ಕಾರ್ಯಕ್ರಮಗಳ
ಸರಳ ಮಾಡೋಣ,

ಸಿಕ್ಕಲ್ಲಿ ಗುಂಪುಗೂಡದೇ, ಸಿಕ್ಕಸಿಕ್ಕಲ್ಲಿ ತಿನ್ನದೇ
ಸದ್ಯಕ್ಕೆ ಎಲ್ಲರೂ ಎಚ್ಚರಿಕೆ ವಹಿಸೋಣ,
ಕರೋನಾ ಮುಕ್ತ ಭಾರತ ಕಟ್ಟೋಣ ...

– ಡಾ.ಭೇರ್ಯ ರಾಮಕುಮಾರ್,
ಸಾಹಿತಿಗಳು, ಪತ್ರಕರ್ತರು
ಮೊ: 94496 80583 / 63631 72368

GROWERS SOLAR POWER

FENCING AND GENERATING SYSTEMS

GROWERS CORPORATION,
Solarfenceandlights@gmail.com

Since 1992

Power plants Projects and
Water pumping Systems



MADE IN INDIA

Todays Beautiful Moments - Tomarrows Beautiful Memories






*Growers Corporation*
*(Solar Power Generating System)*
** Solar Power Fencing System*
** Solar Water Pumping System*
** Solar Lightings System*

*Growers Corporation. "Svachanda"*
*3rd Block, 6th Cross, Basaveshvara Layout*
*Harangi Main Road, Kushalnagar 571234*
*Kodagu. kakarnataka State*
*Email Id :- Solarfenceandlights@gmail.com*
*Contact Number :*
*9449563621 / 8088881636*


## ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ಆಡಳಿತ ಮಂಡಳಿ

| | | | |
|---|---|---|---|
| ಶ್ರೀ ದೀಪಕ್ ಶರ್ಮಾ<br>ಅಧ್ಯಕ್ಷರು | ಶ್ರೀ ಎನ್. ಸಂಪಂಗಿ<br>ಸಹ–ಅಧ್ಯಕ್ಷರು | ಶ್ರೀ ಆರ್.ಎಮ್. ಪಾಲಣ್ಣ<br>ಉಪಾಧ್ಯಕ್ಷರು | ಶ್ರೀ ಎ.ಎಂ. ಅಣ್ಣಯ್ಯ<br>ಕಾರ್ಯದರ್ಶಿ |
| ಡಾ.ಎಮ್.ಮಹದೇವ ಮೂರ್ತಿ<br>ಸಹ–ಕಾರ್ಯದರ್ಶಿ | ಶ್ರೀ ಕೆ.ಎಸ್. ಆನಂದ್,<br>ಖಜಾಂಚಿ | ಡಾ. ಎಮ್. ಮಹಾದೇವಪ್ಪ<br>ಸದಸ್ಯರು | ಶ್ರೀ ಎನ್.ಡಿ ತಿವಾರಿ,<br>ಸದಸ್ಯರು |
| ಶ್ರೀ ಬಿ. ಶಿವನಗೌಡ<br>ಸದಸ್ಯರು | ಶ್ರೀ ಸಿದ್ದೇಗೌಡ,<br>ಸದಸ್ಯರು | ಶ್ರೀ ಎಸ್. ನಾರಾಯಣಸ್ವಾಮಿ,<br>ಸದಸ್ಯರು | ಶ್ರೀ ಬಿ.ಎಸ್. ರಘುನಾಥ,<br>ಸದಸ್ಯರು |
| ಶ್ರೀ ಎಂ.ಗುರುಮೂರ್ತಿ<br>ಸದಸ್ಯರು | ಡಾ|| ಎನ್. ಸ್ವಾಮಿರಾವ್,<br>ಸಹ ಸದಸ್ಯರು | ಶ್ರೀಮತಿ ಶೋಭ. ಎಚ್.ಜಿ,<br>ಸಹ ಸದಸ್ಯರು | "ಭಾವನೆ"ಗಳಿಗೆ ಬೆಲೆ ಇರದ ಪಕ್ಷದಲ್ಲಿ "ಖಂಡಿತವಾದಿ" ಯಾಗುವುದೇ ಉತ್ತಮ! |

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)

ವನವಿಕಾಸ, ನೆಲಮಹಡಿ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560003

**INSTITUTION OF AGROFORESTRY FARMERS AND TECHNOLOGISTS (R)**
**VANAVIKASA, GROUND FLOOR, 18TH CROSS, MALLESHWARAM,**
**BENGALURU – 560003**

## APPLICATION FORM FOR MEMBERSHIP

ಗೆ/To,
ಕಾರ್ಯದರ್ಶಿಗಳು/Secretary
ಮಾನ್ಯರೇ,

ನಾನು/ನಾವು ತಮ್ಮ ಸಂಸ್ಥೆಯ ಸದಸ್ಯರಾಗಲು ಇಚ್ಛಿಸಿದ್ದೇವೆ. ಈ ಬಗ್ಗೆ ಕೆಳಗೆ ಗುರುತು ಹಾಕಿದ ಸದಸ್ಯತ್ವದ ಶುಲ್ಕ ರೂ ಗಳನ್ನು ಬ್ಯಾಂಕಿನ ಡಿ.ಡಿ/ಚೆಕ್ ನಂ. -------------------- ಬ್ಯಾಂಕಿನ ಹೆಸರು........................................ದಿನಾಂಕ ನೇದನ್ನು ಈ ಮೂಲಕ ಲಗತ್ತಿಸಿದ್ದೇವೆ. ನಮ್ಮ ಸದಸ್ಯತ್ವವನ್ನು ಸ್ವೀಕರಿಸಬೇಕಾಗಿ ವಿನಂತಿ.

**I/We desire to become a members of the institution and enclosed DD/Cheque for Rs............. Bearing No. ..................................dated ........................ drawn on..................................**

| Bank towards membership fee. | | |
|---|---|---|
| ಸದಸ್ಯತ್ವ ಮಾಹಿತಿ/MEMBERSHIP DETAILS | ಪ್ರವೇಶ ರೂ/Admission fees Rs. | ಗುರುತು/Tick(✓) |
| 1 ಸಂಸ್ಥೆ/Institutional/Corporate Membership | : 25,000.00 | |
| 2 ಪೋಷಕ/Patron | : 20,000.00 | |
| 3 ಅಜೀವ ಸದಸ್ಯ/Life Member | : 5,000.00 | |
| 4 ಸಹ ಸದಸ್ಯ/Associate Member | : 2,000.00 | |
| 5 ಸಾಮಾನ್ಯ ಸದಸ್ಯ/Ordinary Member (ಕೃಷಿಕರಿಗೆ ಮಾತ್ರ For Farmers only) | : 100.00 | |

### ಸದಸ್ಯರ ವಿವರ/MEMBERS PROFILE

1 ಹೆಸರು/Name
2. ಉದ್ಯೋಗ/Profession
3. ಸಂಸ್ಥೆ/Corporate/institution
4. ವಿಳಾಸ/Address

ದೂರವಾಣಿ/ಮೊಬೈಲ್/Telephone/Mobile
5 ಊರು/Village ಹೋಬಳಿ/Hobli
6 ತಾಲ್ಲೂಕು/Taluku ಜಿಲ್ಲೆ/District
7 ಪಿನ್ ಕೋಡ್/Pin code ಇ–ಮೇಲ್/E-mail

ಇಂತಿ ತಮ್ಮ ವಿಶ್ವಾಸಿ/Yours faithfully

ಸ್ಥಳ/Place:
ದಿನಾಂಕ/ Date: ರುಜು/Signature

### ಕಛೇರಿ ಉಪಯೋಗಕ್ಕಾಗಿ/FOR OFFICE USE

ಅರ್ಜಿ ಸ್ವೀಕರಿಸಿದ ದಿನಾಂಕ/Application Received on ಮೊಬಲಗು/Amount Rs.
ರಸೀತಿ ಸಂಖ್ಯೆ/Receipt No. ದಾಖಲಾದ ದಿನಾಂಕ/Date of Admission

ಅನುಮೋದಿಸಿದೆ/ Approved

ಕಾರ್ಯದರ್ಶಿ/ Secretary ಉಪಾಧ್ಯಕ್ಷರು/ Vice President ಅಧ್ಯಕ್ಷರು/ President

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಗುಚ್ಛ







ವಿಳಾಸ : "ಕೃಷಿವನ" ತ್ರೈಮಾಸಿಕ ಪತ್ರಿಕೆ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ವನವಿಕಾಸ,
ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ದೂ: 080 23566126
Email: iaftbangalore@gmail.com